# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 135 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.11.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 135 • PRGI No:KARKAN/2023/88055 • VIJAYANAGARA • 27.11.2024 • Wednesday • Page:04 • Rs:2










**ಮೈಕ್ರೋ ನ್ಯೂಸ್**

## ಇಂದು ಬಳ್ಳಾರಿಗೆ ಸಿಎಂ ಸಿದ್ದರಾಮಯ್ಯ

**ಹಂಪಿ ಟೈಮ್ಸ್ ಬಳ್ಳಾರಿ**

ಸಿಎಂ ಸಿದ್ದರಾಮಯ್ಯ ನ.27 ರಂದು ಮಧ್ಯಾಹ್ನ 3.50 ಕ್ಕೆ ತೋರಣಗಲ್‌ನ ಜಿಂದಾಲ್‌ನ ಏರ್‌ಸ್ಟ್ರಿಪ್ ಗೆ ಆಗಮಿಸುವರು.



4.30 ಗಂಟೆಗೆ ಬಳ್ಳಾರಿ ನಗರದ ಇಂದಿರಾ ನಗರದ ಬಳ್ಳಾರಿ ಆರೋಗ್ಯ ಮಾತೆ ಪುಣ್ಯಕ್ಷೇತ್ರ ಆವರಣ ದಲ್ಲಿ ಆಯೋಜಿಸಿರುವ ಬಳ್ಳಾರಿ ಆರೋಗ್ಯ ಮಾತೆ ಅಮೃತ ಸಂಭ್ರಮೋತ್ಸವ ಕಾರ್ಯಕ್ರಮ ದಲ್ಲಿ ಭಾಗವಹಿಸುವರು. ಎಂದು ಸಿಎಂ ವಿಶೇಷ ಕರ್ತವ್ಯಾಧಿಕಾರಿ ಕೆ.ಚಿರಂಜೀವಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

Classified Advertisements
Examples: Job postings, Real estate listings, Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com


# ವಿಜ್ಞಾನ ಚಿತ್ರ ಬಿಡಿಸುವ ಸ್ಪರ್ಧೆ

### ಪ್ರತಿ ಶುಕ್ರವಾರ ಸ್ಪರ್ಧೆ । ಭಾನುವಾರದ ಫಲಿತಾಂಶ ಪ್ರಕಟ । ನಿಮ್ಮೊಂದಿಗೆ ಹಂಪಿ ಟೈಮ್ಸ್ ಬಳಗ
### ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಲು ಸಹಕಾರಿ । ಮಕ್ಕಳಲ್ಲಿ ಕಲಿಕಾಸಕ್ತಿ ಬೆಳೆಸಲು ರಹದಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರೀತಿಯ ವಿದ್ಯಾರ್ಥಿಗಳೇ,

ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲೇಬೇಕೆಂಬ ಮಹತ್ವಾಕಾಂಕ್ಷಿವುಳ್ಳ ವಿದ್ಯಾರ್ಥಿ ಗಳಲ್ಲಿ ಸ್ಫೂರ್ತಿ ತುಂಬಲು ಹಂಪಿ ಟೈಮ್ಸ್ ಬಳಗ ವಿನೂತನ ಪ್ರಯತ್ನಕ್ಕೆ ಮುಂದಾಗಿದೆ.

ಎಸ್ಸೆಸ್ಸೆಲ್ಸಿ ವಿಜ್ಞಾನದ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಹೆಚ್ಚಿನ ಅಂಕ ಪಡೆಯಲು ಪರೀಕ್ಷೆಯಲ್ಲಿ ಬರಬಹುದಾದ ಪಠ್ಯದಲ್ಲಿನ ಸಂಭವನೀಯ ಚಿತ್ರಗಳನ್ನು ಸ್ಪಷ್ಟವಾಗಿ ಬರೆಯುವ ಅಭ್ಯಾಸ ಇಂದಿನಿಂದಲೇ ಆರಂಭಿಸುವ ನಿಟ್ಟಿನಲ್ಲಿ ಈ ಸ್ಪರ್ಧೆ ಏರ್ಪಡಿಸಲಾಗುತ್ತಿದೆ.

ಮಕ್ಕಳಲ್ಲಿ ಪರೀಕ್ಷಾ ಪೂರ್ವ ಸಿದ್ಧತೆಗಾಗಿ ಹಾಗೂ ಚಿತ್ರ ಬಿಡಿಸುವ ಆಸಕ್ತಿಯನ್ನು ಹೆಚ್ಚಿಸುವ ಸಲುವಾಗಿ ವಾರಕ್ಕೆ ಒಂದು ಚಿತ್ರವನ್ನು ನೀಡಲಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳು ನಿಗದಿಪಡಿಸಿದ ದಿನಾಂಕದಂದು ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಉತ್ತಮ ಫಲಿತಾಂಶ ಪಡೆಯುವಿರೆಂಬ ಆಶಾಭಾವನೆ ಪತ್ರಿಕೆಯ ಬಳಗದ್ದಾಗಿದೆ.

**ಸಾಮಾನ್ಯ ಸೂಚನೆಗಳು**

1. ವಿದ್ಯಾರ್ಥಿಯು 2023-24 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಾಲಾ ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ






ಶುಕ್ರವಾರದಂದು ಚಿತ್ರ ಬಿಡಿಸಬೇಕು.

3. ಪರೀಕ್ಷಾ ನಿಯಮದಂತೆ ಚಿತ್ರವನ್ನು ಪೆನ್ಸಿಲ್ ನಿಂದ ಬಿಡಿಸುವುದು.
4. ಆಯಾ ಶಾಲಾ ಶಿಕ್ಷಕರು ಮಕ್ಕಳು ಬರೆದ ಚಿತ್ರಗಳಲ್ಲಿ ದಿ ಬೆಸ್ಟ್ ಒಂದು ಚಿತ್ರದೊಂದಿಗೆ, ವಿದ್ಯಾರ್ಥಿಯ ಫೋಟೋ, ಹೆಸರು, ಶಾಲೆಯ ಹೆಸರು, ತಾಲೂಕಿನ ವಿವರದೊಂದಿಗೆ ಮುಖ್ಯ ಗುರುಗಳು / ವಿಜ್ಞಾನ ಶಿಕ್ಷಕರ ಸಹಿಯೊಂದಿಗೆ ಮೊಬೈಲ್ ಸಂಖ್ಯೆ 9972603099 ಗೆ ಸಂಜೆ 6.00 ಗಂಟೆ ಒಳಗೆ ಅಂದೇ ಕಳುಹಿಸಬಹುದು.
5. ತಡವಾಗಿ ಕಳುಹಿಸಿದ ಚಿತ್ರಗಳನ್ನು ಪರಿಗಣಿಸ ಲಾಗುವುದಿಲ್ಲ.
6. ಪರಿಣಿತ ಶಿಕ್ಷಕರ ತಂಡದ ಆಯ್ಕೆಯೇ ಅಂತಿಮವಾಗಿದ್ದು, ಆಯ್ಕೆಯಾದ ಅತ್ಯುತ್ತಮವಾದ ಮೂರು ಚಿತ್ರಗಳನ್ನು ವಿದ್ಯಾರ್ಥಿಯ ಫೋಟೋ ಸಹಿತ ಭಾನುವಾರದ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ವಿದ್ಯಾರ್ಥಿಗಳ ಆಸಕ್ತಿಯನ್ನು ಪ್ರೋತ್ಸಾಹಿ ಸಲಾಗುವುದು.
7. ಪ್ರತಿ ಶುಕ್ರವಾರ ಬಿಡಿಸಬೇಕಾದ ವಿಜ್ಞಾನದ ಚಿತ್ರದ ಹೆಸರನ್ನು ಗುರುವಾರ ಪ್ರಕಟಿಸಲಾಗುವುದು.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ, ಶೈಕ್ಷಣಿಕ ಪ್ರಗತಿಗಾಗಿ ಶಾಲಾ ಮುಖ್ಯಗುರುಗಳು ಹಾಗೂ ಶಿಕ್ಷಕರು ಪತ್ರಿಕಾ ಬಳಗದ ವಿನೂತನ ಪ್ರಯತ್ನಕ್ಕೆ ಸಹಕರಿಸಿ, ಎಲ್ಲರೂ ಕೈಜೋಡಿಸಿ ಪ್ರೋತ್ಸಾಹಿಸಬೇಕೆಂದು ಹಂಪಿ ಟೈಮ್ಸ್ ಬಳಗದ ಕಳಕಳಿಯ ಮನವಿಯಾಗಿದೆ.

**ಆನಂದ ಬಾಣ**




# ಇವಿಎಂ ಬದಲು ಬ್ಯಾಲೆಟ್ ಪೇಪರ್ ಕೋರಿದ್ದ ಪಿಐಎಲ್ ಸುಪ್ರೀಂ ಕೋರ್ಟ್‌ನಲ್ಲಿ ವಜಾ

**ಹಂಪಿ ಟೈಮ್ಸ್ ಬಳ್ಳಾರಿ**

ಮತಯಂತ್ರಗಳ (ಇವಿಎಂ) ಬದಲು ಬ್ಯಾಲೆಟ್ ಪೇಪರ್ ಮತದಾನ ವ್ಯವಸ್ಥೆಯನ್ನು ಮತ್ತೆ ಜಾರಿಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಇಂದು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಬ್ಯಾಲೆಟ್ ಪೇಪರ್ ಬದಲು ಇವಿಎಂ ಜಾರಿಗೊಳಿಸಿದ ಕ್ರಮ ಪ್ರಶ್ನಿಸಿ ಡಾ.ಕೆ.ಎ.ಪೌಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿಕ್ರಂ ನಾಥ್ ಮತ್ತು ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರಿದ್ದ ವಿಭಾಗೀಯ ಪೀಠ ವಜಾಗೊಳಿಸಿದೆ. ಇದರಿಂದಾಗಿ ಚುನಾವಣೆಗಳಲ್ಲಿ ಇವಿಎಂಗಳ ಬಳಕೆಯ ಹಾದಿ ಮತ್ತಷ್ಟು ಸುಗಮವಾಗಿದೆ.

> **ಚುನಾವಣೆಯಲ್ಲಿ ಸೋತಾಗ ಇವಿಎಂ ತಿರುಚಲಾಗುತ್ತದೆ ಎನ್ನುತ್ತೀರಿ, ಗೆದ್ದಾಗ ಏನೂ ಹೇಳುವುದಿಲ್ಲ ಎಂದ ವಿಭಾಗೀಯ ಪೀಠ**

ಈ ಹಿಂದೆ ಆಂಧ್ರದಲ್ಲಿನ ರಾಜಕೀಯ ನಾಯಕರ ಹೇಳಿಕೆಗಳನ್ನು ಗಮನಿಸಿದಾಗ ರಾಜಕೀಯ ನಾಯಕರಾದ ಚಂದ್ರ ಬಾಬು ನಾಯ್ಡು ಸೋತಾಗ ಮತ್ತು ಜಗನ್ ಮೋಹನ್ ರೆಡ್ಡಿ ಇತ್ತೀಚಿನ ಚುನಾವಣೆಗಳಲ್ಲಿ ಸೋತಾಗ ಅವರೂ ಸಹ ಒಬ್ಬರಿಗೊಬ್ಬರು ಇವಿಎಂ ಗಳನ್ನು ತಿರುಚಬಹುದು ಎಂಬ ಆರೋಪ-ಪ್ರತ್ಯರೋಪಗಳ ಸ್ಮರಿಸಿದ ನ್ಯಾಯಾದೀಶರು ಅರ್ಜಿದಾರರ ವಾದವನ್ನು ತಳ್ಳಿಹಾಕಿದ ವಿಭಾಗೀಯ ಪೀಠ, ಚುನಾವಣೆಯಲ್ಲಿ ಗೆದ್ದರೆ ಇವಿಎಂಗಳನ್ನು ತಿರುಚಿಲ್ಲ, ಸೋತಾಗ ಇವಿಎಂಗಳನ್ನು ತಿರುಚಲಾಗುತ್ತದೆ ಎಂದು ಹೇಳಲಾಗುತ್ತದೆ. ಹೀಗಾಗಿ ಇಂಥ ವಾದ ಮಂಡಿಸಲು ಇದು ಸೂಕ್ತ ಜಾಗ ಅಲ್ಲ ಎಂದು ವಿಭಾಗೀಯ ಪೀಠ ಇದೇ ವೇಳೆ ಅಭಿಪ್ರಾಯಪಟ್ಟಿತು.

ಅರ್ಜಿದಾರರು, ಇವಿಎಂ ಬದಲು ಬ್ಯಾಲೆಟ್ ಪೇಪರ್ ಮತದಾನ ವ್ಯವಸ್ಥೆಯನ್ನು ಪುನಃ ಸ್ಥಾಪಿಸಬೇಕು ಎಂಬ ಕೋರಿಕೆಯೊಂದಿಗೆ, ಚುನಾವಣೆಯ ಸಮಯದಲ್ಲಿ ಹಣ, ಮದ್ಯ ಸೇರಿದಂತೆ ಆಮಿಷಗಳನ್ನು ಒಡ್ಡುವುದು ಸಾಬೀತಾದಲ್ಲಿ ಅಭ್ಯರ್ಥಿಗಳನ್ನು ಕನಿಷ್ಠ 5 ವರ್ಷ ಚುನಾವಣಾ ಸ್ಪರ್ಧೆಯಿಂದ ನಿಷೇಧಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು. ಚುನಾವಣೆಯಲ್ಲಿ ಪಾಲ್ಗೊಳ್ಳುವಂತೆ ಮತದಾರರಿಗೆ ಶಿಕ್ಷಣ ಕಾರ್ಯಕ್ರಮ ಆಯೋಜಿಸಬೇಕು. ರಾಜಕೀಯ ಪಕ್ಷಗಳ ನಿಧಿಯನ್ನು ಪರಿಶೀಲಿಸಲು ತನಿಖಾ ವ್ಯವಸ್ಥೆ ರೂಪಿಸಬೇಕು. ಚುನಾವಣಾ ಸಂಬಂಧಿ ಹಿಂಸಾಚಾರಗಳನ್ನು ತಡೆಗಟ್ಟಲು ನೀತಿ ರೂಪಿಸಬೇಕು ಎಂದು ಮನವಿ ಮಾಡಿದ್ದರು. ಈ ಎಲ್ಲಾ ಕೋರಿಕೆಗಳನ್ನು ತಳ್ಳಿಹಾಕಿದ ವಿಭಾಗೀಯ ಪೀಠ, ರಾಜಕೀಯ ಪಕ್ಷಗಳಿಗೆ ಈ ವ್ಯವಸ್ಥೆಯಿಂದ ಯಾವುದೇ ತೊಂದರೆ ಇಲ್ಲ, ನಿಮಗೆ ಸಮಸ್ಯೆ ಇದೆ ಎಂದು ಅಭಿಪ್ರಾಯಪಟ್ಟಿತಲ್ಲದೆ, ಈ ಎಲ್ಲಾ ಕೋರಿಕೆಗಳನ್ನು ತಳ್ಳಿಹಾಕಿದ ವಿಭಾಗೀಯ ಪೀಠ, ನಾವು ಇದನ್ನು ತಳ್ಳಿಹಾಕುತ್ತಿದ್ದೇವೆ. ನೀವು ಇದನ್ನೆಲ್ಲ ವಾದಿಸುವ ಸ್ಥಳ ಇದು ಅಲ್ಲ ಎಂದು ಹೇಳಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಳಿಸಿ ಆದೇಶಿಸಿತು.


# ಕ್ಷೇತ್ರದಲ್ಲಿ ಕಳಪೆ ಕಾಮಗಾರಿ ಸಹಿಸುವುದಿಲ್ಲ

### ಶಾಸಕ ನೇಮಿರಾಜ್ ನಾಯ್ಕ ಖಡಕ್ ಸೂಚನೆ । ಆಹಾರ ಧಾನ್ಯ ಸರಬರಾಜು ಎಜೆನ್ಸಿಗೆ ಬಿಲ್ ಮಾಡಬೇಡಿ

**ಹಂಪಿ ಟೈಮ್ಸ್ ಕೊಟ್ಟೂರು**

ನನ್ನ ಕ್ಷೇತ್ರದಲ್ಲಿ ಕಳಪೆ ಕಾಮಗಾರಿಗೆ ಅವಕಾಶ ಇಲ್ಲ, ನಾನೆಂದೂ ಅದನ್ನು ಸಹಿಸುವುದಿಲ್ಲ. ಗುಣಮಟ್ಟದ ಕಾಮಗಾರಿಗೆ ಮೊದಲ ಆದ್ಯತೆ ನೀಡಿ, ನಿರ್ಲಕ್ಷಿಸಿದರೆ ಸೂಕ್ತ ಕ್ರಮ ಕೈಗೊಳ್ಳ ಬೇಕಾಗುತ್ತದೆ ಎಂದು ಶಾಸಕ ನೇಮಿರಾಜ್ ನಾಯ್ಕ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ತಾಲೂಕು ಪಂಚಾಯಿತಿಯಲ್ಲಿ ಮಂಗಳವಾರ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಲಂಬಾಣಿ ಅಭಿವೃದ್ಧಿ ನಿಗಮದಲ್ಲಿ ನಿರ್ಮಾಣವಾದ ಶುದ್ಧ ಕುಡಿಯುವ ನೀರಿನ ಘಟಕಗಳು ಕಳಪೆಯಾಗಿದ್ದು, ಇನ್ನೂ ಆಯಾ ಗ್ರಾಪಂ ವಶವಾಗಿಲ್ಲ. ಈ ಕುರಿತು ಕ್ಷೇತ್ರದಲ್ಲಿ ಮಾಹಿತಿ ಪಡೆದು ತನಿಖೆಗೆ ಆದೇಶ




ನೀಡುತ್ತೇನೆ ಎಂದರು.

ಕೋಟಿ ಕೋಟಿ ರೂ. ಕೊಳ್ಳೆ ಹೊಡೆದವರನ್ನು ಬಿಡ್ತೀರಿ. ಮಳೆಗೆ ಬಿದ್ದ ಮನೆಗಳಿಗೆ ಎರಡು ಸಾವಿರ, ಮೂರು ಸಾವಿರ ರೂ. ಕೊಡ್ತೀರಿ, ಪಾಪ ರೈತರನ್ನು ಹಿಂಸಿಸುವುದು ಸೂಕ್ತವಲ್ಲ, ಸರ್ಕಾರದ ಆದೇಶ ಬಿಟ್ಟು, ಮನೆ ಬಿದ್ದವರಿಗೆ 30 ರಿಂದ 40 ಸಾವಿರ ರೂ. ಪರಿಹಾರ ಕೊಡಿ ಎಂದು ಡಿ.ಆರ್.ಡಿ. ಎಇಇ

>>4

# ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸರ್ವರೂ ಶ್ರಮಿಸಿ

### ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ। ನಾನು ಕೂಡ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ಓದಿದವನು

**ಹಂಪಿ ಟೈಮ್ಸ್ ಕೂಡ್ಲಿಗಿ**

ಸರ್ಕಾರಿ ಶಾಲಾ ಮಕ್ಕಳ ಭವಿಷ್ಯ ಉಜ್ವಲವಾಗಲು ಶಿಕ್ಷಕರ ಅವಿರತ ಪರಿಶ್ರಮ ಅವಶ್ಯಕವಾಗಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವರಿ ಸಮಿತಿಗಳ ಸಮನ್ವಯ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದೆ. ಅದಕ್ಕಾಗಿ ಉತ್ತಮ ಗುಣಮಟ್ಟದ ಶಿಕ್ಷಣ ಅತ್ಯವಶ್ಯಕವಾಗಿದೆ.

ವಿದ್ಯಾರ್ಥಿಗಳು ಶಿಕ್ಷಕರ ಮಾತು ಕೇಳುತ್ತಾರೆ ಶಿಕ್ಷಕರು ಸಹ ಆದರ್ಶ ಗುಣಗಳಿಂದ ವಿದ್ಯಾರ್ಥಿ ಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ನಾನು ಕೂಡ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ಓದಿದವನು ಅದಕ್ಕಾಗಿ ಸರ್ಕಾರಿ




ಶಾಲೆಗಳ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ಪರಿಚಯವಿದೆ. ಈ ಮೊದಲು ಶಿಕ್ಷಣ ಕೇವಲ ಕಲಿಕೆಗೆ ಮಾತ್ರ ಸೀಮಿತವಾಗಿತ್ತು. ಜಾಗತೀಕರಣದ ನಂತರ ಪ್ರತಿಯೊಬ್ಬ ವ್ಯಕ್ತಿಯೂ ವಿಶ್ವಮಟ್ಟದಲ್ಲಿ ಬೆಳೆಯುವ ಅವಕಾಶ ಇದೆ. ಪೋಷಕಾಂಶಯುಕ್ತ ಉತ್ತಮ ಆಹಾರ, ಒಳ್ಳೆಯ ಶಿಕ್ಷಣ, ಇತ್ಯಾದಿ ಪೂರಕ ಅಂಶಗಳನ್ನು ಒದಗಿಸುವ ಕೆಲಸ ಸರ್ಕಾರ ಮಾಡುತ್ತದೆ, ಯಾವ ರೀತಿ ವಿದ್ಯಾರ್ಥಿಗಳನ್ನು ಬೆಳೆಸಬೇಕು, ಸುಶಿಕ್ಷಿತರನ್ನಾಗಿ ಮಾಡಬೇಕು ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಹೆತ್ತವರು, ಶಿಕ್ಷಕರು, ನೆರೆಯವರು, ಶಾಲಾ ಅಭಿವೃದ್ಧಿ ಸಮಿತಿಯವರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಸ್ಡಿಎಂಸಿ ರಾಜ್ಯಾಧ್ಯಕ್ಷ ಉಮೇಶ್ ಜಿ. ಗಂಗವಾಡಿ, ರಾಜ್ಯ ಉಪಾಧ್ಯಕ್ಷ ಗುನ್ನಳ್ಳಿ ರಾಘವೇಂದ್ರ, ರಾಜ್ಯ ಕಾರ್ಯದರ್ಶಿ ಜಿ.ಎಸ್.ಪಾರ್ವತಿ, ಖಜಾಂಚಿ ಜ್ಯೋತಿ ರಾಮಶೆಟ್ಟಿ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಜಿ.ಕೊಟ್ರಗೌಡ, ಬಿಇಒ ಪದ್ಮನಾಭ ಕರಣಂ ಸೇರಿದಂತೆ ಅನೇಕರು ಇದ್ದರು.

# ನ.29 ರಂದು ನೇರ ಸಂದರ್ಶನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ನ.29 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಳೇ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಜೆಎಸ್‌ಡಬ್ಲ್ಯೂ ಸಿಮೆಂಟ್ ಕಂಪನಿ ಮತ್ತು ಆಕ್ಸಿಸ್ ಬ್ಯಾಂಕ್ ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ ಮತ್ತು ಸ್ವ-ವಿವರಗಳೊಂದಿಗೆ ಹಳೇ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಅಂದು ನಡೆಯುವ ನೇರ ಸಂದರ್ಶನದಲ್ಲಿ ಆಸಕ್ತ ಅಭ್ಯರ್ಥಿಗಳು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.9742718891, 9663263086, 9900827768, 6360408094 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಅಧಿಕಾರಿ ಹಟ್ಟಪ್ಪ ತಿಳಿಸಿದ್ದಾರೆ.

## ಸ್ಟುಡೆಂಟ್ ಕಾಲಂ

# ಹೀಗೆ ರೂಢಿಸಿಕೊಂಡರೆ ಬದುಕು ಚೆನ್ನ



ವರಕವಿ ಬೇಂದ್ರೆ ತಮ್ಮ ಕವನವೊಂದರಲ್ಲಿ 'ಜೀವನದ ಬ್ಯಾಸರ ಹರಿಸಕ ಹಾಡು ನುಡಿಸಾಕ ಹೆಜ್ಜೇನು ಬೇಕು ಒಂದು ಹೂ ಬಿಟ್ಟ ಹುಣಿಸಿಮರ ಸಾಕು' ಎಂದು ಸಾರುವ ಮೂಲಕ ಜೀವನದ ವ್ಯಾಖ್ಯೆಯನ್ನೇ ಬರೆದಿದ್ದಾರೆ. ಜೀವನೋತ್ಸವಕ್ಕಾಗಿ ಹಣ ಬೇಕಿಲ್ಲ. ಸುಖದ ಸುಪ್ಪತ್ತಿಗೆ ಬೇಕಾಗಿಲ್ಲ. ಪ್ರಕೃತಿಯಲ್ಲಿ ಎದುರೇ ಇರುವ ಒಂದು ಹೂ ಬಿಟ್ಟ ಹುಣಸೆ ಮರದ ನೋಟ ಸಾಕು. ಪರಿಸರದಲ್ಲಿಯೇ ಸುತ್ತ ಮುತ್ತ ಲಾಸ್ಯ ಮಾಡುತ್ತಿರುವಾಗ ಕಸ್ತೂರಿ ಮೃಗದಂತೆ ಸುವಾಸನೆ ಅರಸುತ್ತ ಸಾಗುವ ನಮಗೆ ಜೀವನೋತ್ಸಹ ಮರುಚಿಕೆ ಆಗಿಬಿಡುತ್ತದೆ. ಯಾವ ಸಂದರ್ಭದಲ್ಲಿಯೂ ಹತಾಶರಾಗದಿರಿ, ಬದುಕಿನಲ್ಲಿ ಉತ್ಸಾಹ ಕಳೆದುಕೊಳ್ಳದಿರಿ. ಕಾರಣವಿಲ್ಲದೆ ಋಣಾತ್ಮಕ ಭಾವನೆ ಬೆಳೆಸಿಕೊಳ್ಳದಿರಿ. ಚಿಕ್ಕ ಪುಟ್ಟ ಮಾತಿಗೂ ಅನ್ಯಾರ್ಥ ಹಚ್ಚಿ ಮನಸ್ಸು ಮುದುಡಿಸಿಕೊಳ್ಳಬೇಡಿ. ನಮ್ಮ ಸುತ್ತಮುತ್ತಲು ಸಾವು ಕೇಕೆ ಹಾಕುವಾಗಲೂ ಧೈರ್ಯ ಕಳೆದುಕೊಳ್ಳದಿರಿ. ಆಪತ್ಕಾಕಾಲದಲ್ಲಿ ಪರರಿಗೆ ಸಹಾಯ ಮಾಡುವಾಗ ನಿಮ್ಮ ಜೀವನೋತ್ಸಹದ ಶವನಿಧಿಯಾಗುತ್ತದೆ. ಸಹಾಯ ಹಸ್ತ ಚಾಚಿ ಪ್ರತಿಫಲ ನಿರೀಕ್ಷಿಸಬೇಡಿ. ಬದುಕಿನ ಪ್ರತಿಯೊಂದು ಕ್ಷಣವನ್ನು ಸೂಚಿಸುವ ಮನಸ್ಥಿತಿ ನಿಮ್ಮದಾಗಿರಲಿ. ಕನಸು ಮನಸಿನಲ್ಲಿ ಇತರರಿಗೆ ತೊಂದರೆ ನೀಡುವ ವಿಕೃತ ಸುಖದ ಸೆರೆಯಾಗಬೇಡಿ.

ನಮ್ಮೆಲ್ಲ ಮನೋವೈಕಲ್ಯಗಳ ಮೂಲ ಅಸೂಯೆ, ಅಹಂಕಾರ, ತೀರಲಾರದ ಹಣದ ಹಸಿವು. ಪರನಿಂದೆ ಹಾಗೂ ಭವಿಷ್ಯದ ಕುರಿತು ಕಾರಣವಿಲ್ಲದ ಭಯ. ಇವುಗಳೆಲ್ಲವನ್ನು ದಾರ್ಶನಿಕನಂತೆ ಕಂಡ ಕವಿ, ಎರಡೇ ಎರಡು ಸಾಲುಗಳ ಪಲ್ಲವಿಯಲ್ಲಿ ಜೀವನದ ಸಾರ ಸರ್ವಸ್ವವನ್ನು ಹಿಡಿದಿಟ್ಟ ಹಾಗೆ ಹೇಳುತ್ತಾನೆ. ಜೀವನ ಎಂದರೆ ಏನು? ಅದರಲ್ಲಿ ಎಲ್ಲವೂ ಅಡಗಿದೆ. ಮಮತೆ, ಕರುಣೆಯಿಂದ ಕೂಡಿದ ಹೃದಯ, ಮಾನ್ಯಕ್ಕೆ ಮುದು ನೀಡುವ ಮಾತುಗಳು. ಈ ಮನೋಜ್ಞ ಮಾತುಗಳು ನಮ್ಮ ನಿಮ್ಮೆಲ್ಲರ ಬಾಳ ಸಂಗಾತಿಗಳಾಗಲಿ. ಆಗ ಬದುಕು ಗರಿಗೆದರಿ ಹಾರಾಡುವ ಹಕ್ಕಿಯಂತಾಗುತ್ತದೆ. ಈ ಬದುಕಿನ ಪರಿ ನಮ್ಮ ದೀಟಿಗೆಯಾಗಲಿ.

**– ಬಸವರಾಜ ಹಿರೇಮಠ 8ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ, ಬಸರಕೋಡು. ಹ.ಬೊ.ಹಳ್ಳಿ(ತಾ)

**ಮಕ್ಕಳ ಜ್ಞಾನಭಂಡಾರ ಹೆಚ್ಚಳಕ್ಕೆ ಇರಲಿ ಮನೆಗೊಂದು ದಿನಪತ್ರಿಕೆ**

**ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು**

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
**99029 09399, 99805 59681**
**97407 42251, 80735 89125**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ಡಿಜಿಟಲ್ ಅರೆಸ್ಟ್ ವಂಚಕರಿದ್ದಾರೆ ಎಚ್ಚರ

ಇತ್ತೀಚೆಗೆ ಡಿಜಿಟಲ್ ತಂತ್ರಜ್ಞಾನದ ಮೂಲಕ ವ್ಯವಹಾರ ನಡೆಸುವವರ ಸಂಖ್ಯೆ ಗಣನೀಯವಾಗಿ ಏರುತ್ತಲೇ ಸಾಗುತ್ತಿದೆ. ಅಂದರೆ ಬದಲಾದ ವ್ಯವಸ್ಥೆಯಲ್ಲಿ ಹೊಸ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವಲ್ಲಿ ಜನರು ವೇಗವಾಗಿಯೇ ಮುನ್ನಡೆಯುತ್ತಿದ್ದಾರೆ ಎಂದು ಹೇಳಬಹುದು.

ಆದರೆ ಡಿಜಿಟಲ್ ಹಣಕಾಸು ವ್ಯವಹಾರದಲ್ಲಿ ವಂಚನೆಯ ಪ್ರಕರಣಗಳು ಕೂಡ ತೀವ್ರವಾಗಿ ಏರುತ್ತಿರುವುದು ಗಂಭೀರ ವಿಷಯವಾಗಿ ಪರಿಣಮಿಸಿದೆ. ಕಳೆದ ಒಂದು ದಶಕದಿಂದ ಸೈಬರ್ ಅಪರಾಧವು ಹೊಸ ಸವಾಲುಗಳನ್ನು ಒಡ್ಡುತ್ತಿರುವುದು ಆತಂಕದ ವಿಷಯವಾಗಿದೆ. ಆರಂಭದಲ್ಲಿ ಆನ್‌ಲೈನ್ ಬ್ಯಾಂಕಿಂಗ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ ಮಾಹಿತಿ ಸೇರಿದಂತೆ ಹಲವಾರು ಸೈಬರ್ ಅಪರಾಧಗಳನ್ನು ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಎನ್ನುವ ಹೊಸ ತರಹದ ಸೈಬರ್ ವಂಚನೆಯ ಮೂಲಕ ಅಮಾಯಕರನ್ನು ವಂಚಿಸುತ್ತಿದ್ದಾರೆ. ವಂಚಕರು ಮೊದಲು ಅಮಾಯಕರನ್ನು ಫೋನ್ ಮೂಲಕ ಸಂಪರ್ಕಿಸುತ್ತಾರೆ. ತಾವು ಪೋಲೀಸ್, ಜಾರಿ ನಿರ್ದೇಶನಾಲಯ (ಇಡಿ), ಸಿಬಿಐ ಮುಂತಾದ ತನಿಖಾ ಸಂಸ್ಥೆಗಳ ಅಧಿಕಾರಿಗಳೆಂದು ಪರಿಚಯಿಸಿಕೊಳ್ಳುತ್ತಾರೆ. ಇದಕ್ಕಾಗಿ ನಕಲಿ ಗುರುತಿನ ಚೀಟಿಗಳನ್ನು ಕೂಡ ತೋರಿಸಿ ನಂಬಿಸುತ್ತಾರೆ. ತಾವು ಯಾವ ತನಿಖಾ ಸಂಸ್ಥೆಯ ಅಧಿಕಾರಿಗಳೆಂದು ಹೇಳಿರು ತ್ತಾರೋ ಅಂತಹ ಕಚೇರಿಯ ವಾತಾ ವರಣವನ್ನೇ ಸೃಷ್ಟಿಸಿರು ತ್ತಾರೆ. ಅವರ ಬಗ್ಗೆ ಯಾವುದೇ ಸಂಶಯ ಮೂಡದಂತೆ ಎಲ್ಲ ರೀತಿಯ ವ್ಯವಸ್ಥೆಗಳನ್ನು ಮಾಡಿ ಕೊಂಡಿರುತ್ತಾರೆ. ಹಣ ವನ್ನು ಅಕ್ರಮವಾಗಿ ವರ್ಗಾ ವಣೆ ಮಾಡಿದ್ದೀರಿ ಎಂದೂ ಅಥವಾ ನೀವು ನಿಷೇಧಿತ ವಸ್ತುವನ್ನು ಕೋರಿಯರ್ ಮೂಲಕ ಕಳಿಸಿದ್ದೀರಿ ಅಥವಾ ಪಡೆದುಕೊಂಡಿದ್ದೀರಿ ಎಂದು ಪ್ರತಿಪಾದಿಸುತ್ತಾರೆ. 'ನೀವು ಗಂಭೀರವಾದ ಅಪರಾಧ ಮಾಡಿದ್ದೀರಿ, ಹೀಗಾಗಿ ಹಲವಾರು ವರ್ಷಗಳ ಜೈಲು ಶಿಕ್ಷೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಭಯ ಹುಟ್ಟಿಸುತ್ತಾರೆ. ಸಾರ್ವಜನಿಕರನ್ನು ಸಂಪರ್ಕಿಸಲು ಯಾವುದಾದರೂ ಡಿಜಿಟಲ್ ಮಾರ್ಗ(ಸ್ಕೈಪ್, ವಾಟ್ಸಾಪ್, ಫೇಸ್‌ಬುಕ್, ಝೂಮ್, ಆನ್‌ಲೈನ್ ಕರೆಗಳು ಮತ್ತು ಇತರೆ ವಿಡಿಯೋ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಾರೆ). ಅವರ ಮೇಲೆ ಸುಳ್ಳು ಆರೋಪ ಹೊರಿಸಿ, ಹೆದರಿಸಿ, ಬೆದರಿಸಿ ನಂತರ ಹಣಕ್ಕೆ ಬೇಡಿಕೆ ಇಡುತ್ತಾರೆ. ಆನ್‌ಲೈನ್ ಬ್ಯಾಂಕಿಂಗ್ ಸೇರಿದಂತೆ ಹಲವು ಮಾರ್ಗಗಳ [illegible] ಅಮಾಯಕರಿಂದ ಹಣ ಸುಲಿಗೆ ಮಾಡುತ್ತಾರೆ. ಈಗಾಗಲೇ ದೇಶಾದ್ಯಂತ ಸಾಕಷ್ಟು ಜನರು ಈ ಜಾಲಕ್ಕೆ ಸಿಲುಕಿ ಮೋಸ ಹೋಗಿದ್ದಾರೆ. ಸಂತ್ರಸ್ತರನ್ನು ಮನೆಗಳಲ್ಲೇ ಅಥವಾ ಕೆಲವೊಮ್ಮೆ ಹೊರಗೆ ಬರುವಂತೆ ಮಾಡಿ, ಬೇರೊಂದು ಸ್ಥಳದಲ್ಲಿ ದಿಗ್ಬಂಧನ ವಿಧಿಸಲಾಗುತ್ತದೆ.



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ
Scan For Digital Colourful
HAMPI TIMES E-paper



ಸಂತ್ರಸ್ತರಿಂದ ಹಣ ವರ್ಗಾವಣೆ ಆಗುವವರೆಗೂ ವಂಚಕರು ಅವರನ್ನು ಡಿಜಿಟಲ್ ಬಂಧನದಲ್ಲಿರಿ ಸಿರುತ್ತಾರೆ.

ಇಂತಹ ಸಮಸ್ಯೆಗಳಿಂದ ಪಾರಾಗಲು ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಯಾವುದೇ ತನಿಖಾ ಸಂಸ್ಥೆಗಳ ಅಧಿಕಾರಿಗಳು ಎಂದೂ ಕೂಡ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುವುದಿಲ್ಲ. ಹೀಗಾಗಿ ತನಿಖಾ ಸಂಸ್ಥೆಯ ಅಧಕಾರಿಗಳೆಂದು ಹೇಳಿಕೊಂಡು ಯಾರಾದರೂ ಕರೆ ಮಾಡಿ, ಹಣಕ್ಕೆ ಬೇಡಿಕೆ ಇಟ್ಟಾಗ ಯಾವುದಕ್ಕೂ ಭಯಕ್ಕೊಳಗಾಗ ಬಾರದು. ಕರೆಯನ್ನು ಸ್ಥಗಿತಗೊಳಿಸಿ ಪೊಲೀಸರಿಗೆ ಮಾಹಿತಿ ನೀಡಬೇಕು. ಅಂತಹ ಕರೆಗಳನ್ನು ಬ್ಲಾಕ್ ಮಾಡಬೇಕು. ವಂಚನೆಯ ಬಗ್ಗೆ ಅನುಮಾನ ಬಂದರೆ ಕೂಡಲೇ ಸೈಬರ್ ಸಹಾಯವಾಣಿ/ಪೊಲೀಸರನ್ನು ಸಂಪರ್ಕಿಸಬೇಕು. ರಾಷ್ಟ್ರೀಯ ಮಟ್ಟದಲ್ಲಿ ಸಿಟಿಜನ್ ಫೈನಾನ್ಶಿಯಲ್ ಸೈಬರ್ ಫ್ರಾಡ್ ರಿಪೋರ್ಟಿಂಗ್ ಆ್ಯಂಡ್ ಮ್ಯಾನೇಜ್ ಮೆಂಟ್ ಸಿಸ್ಟಮ್ ಅನ್ನು ರೂಪಿಸಲಾಗಿದೆ. 2021ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಇದರ ಅಡಿಯಲ್ಲಿ ರಾಷ್ಟ್ರೀಯ ಸೈಬರ್ ಅಪರಾಧ ದೂರು ನೀಡುವ ಪೋರ್ಟಲ್ ಡಬ್ಲ್ಯುಡಬ್ಲ್ಯುಡಬ್ಲ್ಯು.ಸೈಬರ್ ಕ್ರೈಮ್.ಜಿವೊವಿ.ಇನ್ ಕಾರ್ಯನಿರ್ವಹಿಸುತ್ತದೆ. ಇದರ ಜೊತೆಗೆ ಸೈಬರ್ ಪ್ರಕರಣಗಳ ಬಗ್ಗೆ ದೂರು ನೀಡುವುದಕ್ಕೆ '1930' ಸಹಾಯವಾಣಿಯನ್ನೂ ಕೂಡ ಆರಂಭಿಸಲಾಗಿದೆ. ಅಪರಿಚಿತ ಅಂತಾರಾಷ್ಟ್ರೀಯ ಫೋನ್ ಕರೆಗಳ ಬಗ್ಗೆ ಎಚ್ಚರವಹಿಸಬೇಕು. ಯಾವುದೇ ಕಾರಣಕ್ಕೂ ಅಪರಿಚಿತರೊಂದಿಗೆ ಖಾಸಗಿ ವಿಷಯಗಳನ್ನು, ಗೌಪ್ಯ ಮಾಹಿತಿಯನ್ನು ಹಂಚಿಕೊಳ್ಳಬಾರದು.

ಡಿಜಿಟಲ್ ಅರೆಸ್ಟ್ ವಂಚಕರಲ್ಲಿ ಬಹುತೇಕರು ದೇಶದ ಹೊರಗಡೆಯಿಂದ ಕಾರ್ಯಾಚರಣೆ ನಡೆಸುತ್ತಾರೆ. ಮ್ಯಾನ್ಮಾರ್, ಲಾವೊಸ್, ತೈವಾನ್, ಕಾಂಬೋಡಿಯಾದಂತಹ ದೇಶಗಳಲ್ಲಿ ಕುಳಿತು ಕರೆ ಮಾಡಿ ವಂಚಿಸುತ್ತಿದ್ದಾರೆ ಎಂಬ ಮಾಹಿತಿ ಇದೆ. ಡಿಜಿಟಲ್ ಮೋಸಕ್ಕೆ ವಂಚಕರು 'ಎಐ ಎಪಿಕೆ' ಎನ್ನುವ ಸಾಫ್ಟವೇರ್ ಮೂಲಕ ವಾಟ್ಸಾಪ್ ಗ್ರುಪ್‌ಗಳಿಗೆ ಲಗ್ಗೆ ಇಟ್ಟು ಇಡೀ ಗ್ರುಪ್‌ನ ಸದಸ್ಯರನ್ನು ವಂಚಿಸುತ್ತಾರೆ. 'ಎಐ ಎಪಿಕೆ' ಸಾಫ್ಟವೇರ್ ಅನ್ನು ಮೊದಲು ವಂಚಕರು ರವಾನಿಸುತ್ತಾರೆ. ಮೊಬೈಲ್‌ನಲ್ಲಿ ಈ 'ಎಐ ಎಪಿಕೆ' ಸಾಫ್ಟವೇರ್ ಡೌನ್ ಲೋಡ್ ಆಗುತ್ತಿದ್ದಂತೆ ಮೊಬೈಲ್ ಹ್ಯಾಕ್ ಆಗುತ್ತದೆ. ಆಗ ವಂಚಕರು ಮೊಬೈಲ್‌ನ ಆಕ್ಸೆಸ್ ಪಡೆದುಕೊಂಡು ನಂತರ ವಾಟ್ಸಾಪ್ ಗ್ರುಪ್‌ಗೆ ಆಡ್ಮಿನ್ ಆದವರೇ ಹೆಸರು ಸೇರ್ಪಡೆ ಮಾಡಿದಂತೆ ತಮ್ಮ ನಂಬರನ್ನು ಸೇರಿಸುತ್ತಾರೆ. ನಂತರ ವಂಚಕರೇ ಅವರ ಮೊಬೈಲ್‌ನಿಂದ ಬ್ಯಾಂಕ್, ಗೇಮ್ಸ ಅಥವಾ ವಿವಿಧ ಬಗೆಯ ಆನ್‌ಲೈನ್ ಸಾಫ್ಟವೇರ್‌ಗಳನ್ನು 'ಎಐ ಎಪಿಕೆ' ಸಾಫ್ಟವೇರ್ ಮೂಲಕ ಹರಿಬಿಟ್ಟು ಕೆವೈಸಿ ಅಪ್‌ಡೇಟ್ ಅಥವಾ ಇತರೆ ಡೌನ್ ಲೋಡ್ ಮಾಡಿಕೊಳ್ಳಲು ಹಲವಾರು ಗುರುತುಗಳನ್ನು ಕಳಿಸಿ ಇದನ್ನು ಕ್ಲಿಕ್ ಮಾಡಿಕೊಳ್ಳಲು ಸೂಚಿಸುತ್ತಾರೆ. ಆ ಮೂಲಕ ಡಿಜಿಟಲ್ ವಹಿವಾಟಿನ ಮಾಹಿತಿ ಸಂಗ್ರಹಿಸಿ ಹಣ ವಂಚನೆ ಮಾಡುತ್ತಾರೆ. ಹೀಗಾಗಿ ಮೊಬೈಲ್‌ಗಳಿಗೆ ಬರುವ ಅನಗತ್ಯ ಆ್ಯಪ್, ಸಾಫ್ಟವೇರ್ ಮೇಲೆ ಕ್ಲಿಕ್ ಮಾಡುವುದನ್ನು ನಿಲ್ಲಿಸುವುದು ಕೂಡ ಒಂದು ಪರಿಹಾರವಾಗಬಲ್ಲದು.

# ಮಕ್ಕಳಲ್ಲಿ ಬದಲಾವಣೆ ತರುವ ಶಕ್ತ್ಯಾಯುಧಗಳು


ತನ್ನ ಪಾಲಕರು ತನ್ನನ್ನು ಪ್ರಶಂಸಿಸಬೇಕು ಎಂಬುದು ಪ್ರತಿ ಮಗುವಿನ ಕನಸು... ಹಾಗೆಯೇ ತಮ್ಮ ಮಕ್ಕಳ ನಡವಳಿಕೆ ನಾಲ್ಕು ಜನ ಮೆಚ್ಚುವ ಆಗಿರಬೇಕು ಎಂಬುದು ಪಾಲಕರ ಆಶಯ. ಮಕ್ಕಳ ಕ್ರಿಯೆಗಳನ್ನು ಅವಹೇಳನ ಮಾಡದೆ, ಶಿಕ್ಷೆ ಕೊಡದೆ ಭಾವನಾತ್ಮಕವಾಗಿ ಅವರಲ್ಲಿ ಶಿಸ್ತನ್ನು ತರುವ, ಆತ್ಮವಿಶ್ವಾಸವನ್ನು ಮೂಡಿಸುವ ನಿಟ್ಟಿನಲ್ಲಿ ಪಾಲಕರು ಕಾರ್ಯನಿರ್ವಹಿಸಲೇಬೇಕು ಎಂದು ಖ್ಯಾತ ಲೇಖಕಿ ಸಾರಾ ಓಕ್ವಲ ಸ್ಮಿತ್ ಹೇಳುತ್ತಾಳೆ.

ನಿಜವಲ್ಲವೇ ಆಕೆಯ ಮಾತುಗಳು. ಪ್ರೀತಿಯ ಮಾತು, ವಾತ್ಸಲ್ಯದ ಸಿಂಚನ, ಮಮತೆಯ ಮಡಿಲುಗಳು ಮಕ್ಕಳನ್ನು ಭಾವನಾತ್ಮಕವಾಗಿ ಒಳಗೊಳ್ಳುವ ಮೂಲಕ ಅವರಲ್ಲಿ ಮಹತ್ತರ ಬದಲಾವಣೆಗಳನ್ನು ತರಬಹುದು.ಮಕ್ಕಳ ಮಾನಸಿಕತೆಯನ್ನು ಅರಿಯುವ ಮೂಲಕ ಮಕ್ಕಳ ನಡವಳಿಕೆಯಲ್ಲಿ ತರಬಹುದಾದ ಬದಲಾವಣೆಗಳು ಇಂತಿವೆ

ಪಾಲಕರು ಮತ್ತು ಮಕ್ಕಳ ನಡುವೆ ಭಾವನಾತ್ಮಕ ಸಂಬಂಧ ಬಲವಾಗಿರಬೇಕು. ಭಾವನಾತ್ಮಕ ಬಂಧವು ಮಕ್ಕಳಲ್ಲಿ ನಂಬಿಕೆ, ಸುರಕ್ಷಿತ ಮನೋಭಾವವನ್ನು ಮೂಡಿಸುವ ಮೂಲಕ ಮಕ್ಕಳು ತಮ್ಮ ಪಾಲಕರ ಸಲಹೆ ಮತ್ತು ಶಿಸ್ತು ಬದ್ಧತೆಗೆ ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ.

ಮಗುವಿನ ದೈಹಿಕ ಬೆಳವಣಿಗೆಯ ಹಂತಗಳು ಪಾಲಕರಿಗೆ ಖಂಡಿತವಾಗಿಯೂ ಗೋಚ ರವಾಗುತ್ತದೆ ಆದರೆ ಮಕ್ಕಳ ಮಾನಸಿಕಬೆಳವಣಿಗೆಯನ್ನು ಅರಿಯು ವುದರ ಜೊತೆಗೆ ಯಾವ ವಯಸ್ಸಿನಲ್ಲಿ ಮಕ್ಕಳಿಂದ ಏನನ್ನು ನಿರೀಕ್ಷಿಸಬಹುದು ಮತ್ತು ಹೇಗೆ ಪ್ರತಿಕ್ರಿಯಿಸ ಬಹುದು ಎಂಬುದರ ಅರಿವನ್ನು ಹೊಂದಿರುವುದು ಅತ್ಯವಶ್ಯಕ

ಮಕ್ಕಳಲ್ಲಿ ಧನಾತ್ಮಕ ಬಲ ವರ್ಧನೆಯನ್ನು ರೂಢಿಸು ವುದು.. ಮಕ್ಕಳನ್ನು ಶಿಕ್ಷಿಸದೆ ಅವರಲ್ಲಿ ಧನಾತ್ಮಕತೆಯನ್ನು ರೂಢಿಸಿ ಅವರ ಒಳ್ಳೆಯ ನಡವಳಿಕೆಯನ್ನು ಪ್ರಶಂಸಿಸಬೇಕು.. ಮುಕ್ತವಾದ ಧನಾತ್ಮಕ ಪ್ರಶಂಸೆಯು ಮಕ್ಕಳನ್ನು ಮತ್ತಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper



ಪ್ರೇರೇಪಿಸುತ್ತದೆ ಮತ್ತು ಹೊಂದಾಣಿಕೆಯ ಮನೋಭಾವವನ್ನು ಸೃಷ್ಟಿಸುತ್ತದೆ.

ಮಕ್ಕಳೊಂದಿಗೆ ಸಹಾನುಭೂತಿಯಿಂದ ವರ್ತಿಸಿ... ನಮಗೆ ಕ್ಷುಲ್ಲಕ ಮತ್ತು ತಮಾಷೆ ಎಂದೆನಿಸುವ ಎಷ್ಟೋ ಕೆಲಸಗಳು ಮತ್ತು ಕ್ರಿಯೆಗಳು ಮಕ್ಕಳ ಬದುಕಿನಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಅಂತಹ ಸಮಯದಲ್ಲಿ ಮಕ್ಕಳನ್ನು ತಮಾಷೆ ಮಾಡಿ ಹೀಗಳೆಯದೆ ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸಿ. ಮಕ್ಕಳಿಗೆ ನೀವು ಹಾಕುವ ಮಿತಿಗಳು ಕೂಡ ಅವರಿಗೆ ಹೊರೆ ಎಂದೆನಿಸದಂತೆ ಜಾಗೃತಿ ವಹಿಸಿ. ಈ ರೀತಿ ಪ್ರೀತಿ ಮತ್ತು ಗೌರವ ಪೂರ್ವಕ ಮಿತಿಗಳನ್ನು ಹಾಕುವುದರಿಂದ ಮಕ್ಕಳು ಒಪ್ಪಿಕೊಳ್ಳುವ ಮೂಲಕ ಹೊಂದಾಣಿಕೆಯ ಮನೋಭಾವವನ್ನು ತೋರುತ್ತಾರೆ.

ಸ್ವಾಭಾವಿಕವಾದ ಮತ್ತು ಪರಿಣಾಮಕಾರಿ ವಿಧಾನಗಳನ್ನು ಬಳಸಿ ಮಕ್ಕಳಲ್ಲಿ ತಿಳುವಳಿಕೆಯನ್ನು ಮೂಡಿಸಬೇಕು. ತಮ್ಮ ಕ್ರಿಯೆಗಳ ಪರಿಣಾಮವನ್ನುಅರಿಯುವ ಮಕ್ಕಳು ಹೆಚ್ಚುಜವಾಬ್ದಾರಿಯುತರಾಗಿ ವರ್ತಿಸುತ್ತಾರೆ. ತಮ್ಮ ತಪ್ಪು ಆಯ್ಕೆಗಳು ಹೇಗೆ ತಮ್ಮ ಬದುಕಿನ ಮೇಲೆ ಪರಿಣಾಮವನ್ನು ಬೀರುತ್ತವೆ ಎಂಬುದರ ಕುರಿತು ಶಿಕ್ಷೆಯನ್ನು ಅನುಭವಿಸದೆ ಪಾಠ ಕಲಿಯುತ್ತಾರೆ.

'ನೀರಿಗಿಳಿಯದ ಹೊರತು ಈಜು ಬಾರದು' ಎಂಬ ಮಾತು ಸತ್ಯ ಅಲ್ಲವೇ. ಬದುಕೆಂಬ ನೀರಿಗೆ ಇಳಿಯುವ ಮಕ್ಕಳು ಅದರ ಆಳ, ಅಗಲ, ಒತ್ತಡ, ಹರವನ್ನು ಅರಿಯುವ ಜಾಣ್ಮೆಯನ್ನು ತಮ್ಮದಾಗಿಸಿ ಕೊಳ್ಳಲಿ... ನೀವು ಸೆಕ್ಯೂರಿಟಿ ಗಾರ್ಡ್ ಗಳಂತೆ ಅವರನ್ನು ನೋಡುತ್ತಿರಿ... ಅವಶ್ಯಕತೆ ಬಿದ್ದಾಗ ಮಾತ್ರ ಸಹಾಯ ಮಾಡಿರಿ.

ಎಡವದ ಹೊರತು ಮನುಷ್ಯ ನಡೆಯಲು ಕಲಿಯಲು ಸಾಧ್ಯವಿಲ್ಲ... ನಮ್ಮ ಮಕ್ಕಳು ತಪ್ಪೇ ಮಾಡಬಾರದು ಎಂಬ ಅತಿಯಾದ ಸುರಕ್ಷತಾಭಾವ ಮಗುವಿನ ಮಾನಸಿಕ ಬೆಳವಣಿಗೆಯನ್ನು, ಯೋಚನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ.

ಮಕ್ಕಳು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಿ. ಮಕ್ಕಳು ಹೀಗೆಯೇ ಮಾಡಬೇಕು ಎಂದು ಹೇಳಿಕೊಡುವ ಬದಲು ಏನು ಮಾಡಬೇಕು ಎಂಬುದರ ಕುರಿತು ಅವರೇ ಯೋಚಿಸಿ ತೀರ್ಮಾನ ತೆಗೆದುಕೊಳ್ಳಲು ಸಲಹೆ ನೀಡಿ. ಇದು ಮಕ್ಕಳಲ್ಲಿ ತಾರ್ಕಿಕ ಶಕ್ತಿಯನ್ನು ಮತ್ತು ಸ್ವತಂತ್ರ ಪ್ರವೃತ್ತಿಯನ್ನು ಬೆಳೆಸುತ್ತದೆ.

ಮಕ್ಕಳಲ್ಲಿ ಸ್ವಯಂ ನಿಯಂತ್ರಣ ಶಕ್ತಿಯನ್ನು ಬೆಳೆಸಿ... ಖುದ್ದು ಪಾಲಕರು ತಮ್ಮ ಭಾವನೆಗಳ ಮತ್ತು ಪ್ರತಿಕ್ರಿಯೆಗಳ ಮೇಲೆ ಹತೋಟಿಯನ್ನು ಇರಿಸಿಕೊಳ್ಳುವ ಮೂಲಕ ಮಕ್ಕಳಲ್ಲಿ ಒಳ್ಳೆಯ ನಡವಳಿಕೆ ಮೂಡಲು ಮಾದರಿಯಾಗಿ. ಪಾಲಕರು ಮಕ್ಕಳ ಮೇಲೆ ಮನೆಯ ಇತರ ಸದಸ್ಯರ ಮೇಲೆ ಪದೇ ಪದೇ ಕಿರಿಚಾಡುವುದು, ಹಲ್ಲೆ ಮಾಡುವುದನ್ನು ನೋಡುವ ಮಕ್ಕಳು ತಾವು ಕೂಡ ಹಾಗೆಯೇ ವರ್ತಿಸುತ್ತಾರೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.ಮಕ್ಕಳಕುರಿತುಅದೆಷ್ಟೇಭಿನ್ನಾಭಿಪ್ರಾಯಗಳಿದ್ದರೂ ಮಕ್ಕಳ ಮುಂದೆ ಮಾತ್ರ ಪಾಲಕರು ಏಕಾಭಿಪ್ರಾಯವನ್ನು ಹೊಂದಿರಬೇಕು. ಪಾಲಕರಲ್ಲಿ. ಒಬ್ಬರು ಮಕ್ಕಳನ್ನು ಅತಿಯಾಗಿ ಪೋಷಿಸಿ ಮತ್ತೊಬ್ಬರು ಅತ್ಯಂತ ಕಠಿಣವಾಗಿ ನಡೆದುಕೊಳ್ಳುವುದರ ಬದಲು ಸಮಾನ ಸ್ಥಾಯಿಯಲ್ಲಿ ಮಕ್ಕಳನ್ನು ಬೆಳೆಸುವುದು ವಿಹಿತ.

ಅಂತಿಮವಾಗಿ ಮಕ್ಕಳು ತಪ್ಪು ಮಾಡಿದಾಗ ಅವರನ್ನು ಕಠಿಣವಾಗಿ ನಡೆಸಿಕೊಳ್ಳದೆ ಸೂಕ್ಷ್ಮವಾಗಿ ತಿಳಿ ಹೇಳಿ ಮತ್ತೆ ಬದುಕಿನ ಕಡೆ ಮುಖ ತೋರಬೇಕು. ಪದೇ ಪದೇ ಅವರ ತಪ್ಪುಗಳನ್ನು ಹೀಯಾಳಿಸಿ ಹೇಳುವ ಮೂಲಕ ಅವರನ್ನು ಪಾಪಪ್ರಜ್ಞೆಗೆ ಗುರಿ ಮಾಡಬಾರದು.

ಸಂಜೆ ಪಶ್ಚಿಮದಲ್ಲಿ ಮುಳುಗಿದ ಸೂರ್ಯ ಮರುದಿನ ಮತ್ತೆ ಪೂರ್ವದಲ್ಲಿ ಮತ್ತಷ್ಟು ಪ್ರಕಾಶಮಾನವಾಗಿ ಉದಯಿಸಿ ಬರುತ್ತಾನೆ ಎಂಬ ಅರಿವಿನ ಪ್ರಜ್ಞೆಯನ್ನು ನಮ್ಮದಾಗಿಸಿಕೊಂಡು ಮಕ್ಕಳನ್ನು ಬೆಳೆಸುವಾಗ ಹೊಂದಿದ್ದು ನಮ್ಮ ಮಕ್ಕಳು ನಮ್ಮ ಮುಂದಿನ ಪೀಳಿಗೆಯ ನೇತಾರರು. ಉತ್ತಮ ಮಾನಸಿಕತೆ ಮತ್ತು ಒಳ್ಳೆಯ ನಾಗರಿಕ ಪ್ರಜ್ಞೆಯ ಮಕ್ಕಳನ್ನು ಈ ಜಗತ್ತಿಗೆ ಕೊಡ ಮಾಡುವ ಸೌಭಾಗ್ಯ ನಮ್ಮದಾಗಿದ್ದು ನಮ್ಮ ಕರ್ತವ್ಯದಲ್ಲಿ ಕಿಂಚಿತ್ತು ವಿಮುಖರಾಗದೆ ಈ ಮಹತ್ಕಾರ್ಯದಲ್ಲಿ ನಿರ್ವಹಿಸೋಣ ಎಂಬ ಆಶಯದೊಂದಿಗೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸಂವಿಧಾನ

ಭಾರತೀಯರ ಹೆಮ್ಮೆ ನಮ್ಮ ಸಂವಿಧಾನ
ಅಡಗಿದೆ ಅದರಲ್ಲಿ ನಮ್ಮೆಲ್ಲರ ಅಭಿಮಾನ
ಇದರಲ್ಲಿದೆ ನಾವು ಅನುಸರಿಸಬೇಕಾದ ರೀತಿ ನೀತಿ
ಸಾರುತಿದೆ ನಾವೆಲ್ಲ ಒಂದೇ ಇದ್ದರು ಹಲವು
ಪಂಥ ಜಾತಿ

ಕೊಡುವುದು ಎಲ್ಲರಿಗೂ ಸಮಾನವಾದ ಹಕ್ಕು
ತೋರುವುದು ಪ್ರಗತಿಯಡೆಗೆ ಸಾಗುವ ದಿಕ್ಕು
ನೀಡುತ ಎಲ್ಲರಿಗೂ ಅಭಿವ್ಯಕ್ತಿಯ ಸ್ವಾತಂತ್ರ್ಯ
ಕಳೆಯುತ್ತ ನಮ್ಮೆಲ್ಲರ ದಾಸ್ಯದ ಪರತಂತ್ರ

ಸಂವಿಧಾನವ ನಾವೆಲ್ಲರೂ ಗೌರವಿಸೋಣ
ಅದರ ಹಿರಿಮೆ ವೈಭವವ ಸಾರೋಣ
ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರು
ಭಾರತದ ಸಾರ್ವಭೌಮತ್ವ ಸಾರಿದರು

– ಚೇತನ ಭಾರ್ಗವ, ಬೆಂಗಳೂರು

### ಮುದ್ದಿನ ಅಜ್ಜಿ

ಅಜ್ಜಿ ಅಜ್ಜಿ ನನ್ನ ಮುದ್ದಿನ ಅಜ್ಜಿ
ಎಲ್ಲಿರುವೆ ನೀನು ಬೇಗ ಹೇಳಜ್ಜೀ.
ಬಂದಿಹೆ, ನಾನು ನಿನಗಾಗಿ ಅಜ್ಜಿ
ನೀನಿಲ್ಲದಿರೆ ಎನಗೆ ಬೇಸರವಜ್ಜಿ

ಕಣ್ಣಮುಚ್ಚೆಯ ಆಟವ ಆಡಲು
ಕಂಬದ ಆಟದಿ ಮಜವು ಬರಲು
ಕಥೆ ಹಾಡು ಕುಣಿತವ ನಿ ಕಲಿಸಲು
ಓಡುತ ಓಡುತ ನಾ ಬಳಿ ಬರಲು.

ತಿಂಡಿ ಕೊಡುತ ಮುದ್ದು ಮಾಡುತ
ಸರಿತಪ್ಪುಗಳ ತಿದ್ದಿ ಬುದ್ಧಿ ಹೇಳುತ,
ಹೂ ಹಣ್ಣು ಕಾಯಿಯ ತೋರುತ
ಚೆಂದದಿ ನಿ ನಮ್ಮ ಮಾತು ಕೇಳುತ.

ಅಮ್ಮನು ಕೆಲಸದ ಅವಸರದಲ್ಲಿ,
ಅಪ್ಪನು ಕಚೇರಿ ಗಡಿಬಿಡಿಯಲ್ಲಿ,
ಅಕ್ಕ ಅಣ್ಣ ಇರುವರು ಶಾಲೆಯಲ್ಲಿ
ನಾ ಬರುವೆ ನಿನ್ನಯ ಜೊತೆಯಲ್ಲಿ.

– ಮಮತಾ ಶೃಂಗೇರಿ

# ಕೊಟ್ಟೂರಿನಲ್ಲಿ 15 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಹೊಸ ಎಪಿಎಂಸಿ ನಿರ್ಮಾಣ

## ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ಮಾಜಿ ಶಾಸಕ ಭೀಮಾನಾಯ್ಕ ಭರವಸೆ

■ **ಹಂಪಿ ಟೈಮ್ಸ್ ಕೊಟ್ಟೂರು**



ಕೊಟ್ಟೂರು ಎಪಿಎಂಸಿ ರೈತರ ಜೀವನಾಡಿಯಾಗಿದ್ದು. ವಿಜಯನಗರ ಜಿಲ್ಲೆಯಲ್ಲಿ ನಂಬರ್ ಒನ್ ಎಪಿಎಂಸಿ ಯಾಗಿದೆ. ನಿಮ್ಮ ಎಪಿಎಂಸಿ ಅಭಿವೃದ್ಧಿಗೆ ಸದಾ ನಮ್ಮ ಸಹಕಾರವಿರುತ್ತದೆ ಎಂದು ಕೂಡ್ಲಿಗಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿದರು

ಕೊಟ್ಟೂರು ಎಪಿಎಂಸಿ ಆವರಣದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ನೂತನ ಎಪಿಎಂಸಿ ಆಡಳಿತ ಮಂಡಳಿಗೆ ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಡೀ ರಾಜ್ಯಕ್ಕೆ ಕೊಟ್ಟೂರು ಎಪಿಎಂಸಿ ವ್ಯವಹಾರಿಕ ವಾಗಿ ಹೆಸರಾಗಿದೆ. ಅಭಿವೃದ್ಧಿ ವಿಷಯಕ್ಕೆ ಸದಾ ಬೆಂಬಲವಿದೆ. ಎಪಿಎಂಸಿ ಅಧ್ಯಕ್ಷ ಹರಾಳು ನಂಜಪ್ಪನವರ ಬೇಡಿಕೆಗಳನ್ನು ಮಾಜಿ ಶಾಸಕ ಭೀಮನಾಯ್ಕ ಅವರೊಂದಿಗೆ ಚರ್ಚಿಸಿ ಅನುದಾನ ಬಿಡುಗಡೆ ಮಾಡುತ್ತೇನೆ ಎಂದರು.

ಮಾಜಿ ಶಾಸಕ ಭೀಮನಾಯ್ಕ ಮಾತನಾಡಿ. ಕೊಟ್ಟೂರು ಎಪಿಎಂಸಿಯಲ್ಲಿ ರೈತರಿಗೆ ನಯಾ ಪೈಸೆ ಅನ್ಯಾಯವಾಗಲ್ಲ. ಇಲ್ಲಿಂದ ಚನ್ನೈಗೆ ಮೆಕ್ಕೆಜೋಳ ರವಾನೆಯಾಗಿದೆ. ಎಲ್ಲಾ ರೈತರು ತಮ್ಮ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರುವುದರಿಂದ ಹೆಚ್ಚು ಅನುಕೂಲವಾಗುತ್ತಿದೆ ಎಂದರು.

ನನ್ನ ಅವಧಿಯಲ್ಲಿ ನಾಲ್ಕು ಕೋಟಿ ರೂ. ಅನುದಾನ ಕೊಟ್ಟಿದ್ದೇನೆ. ನೂತನ ಎಪಿಎಂಸಿ ನಿರ್ಮಾಣಕ್ಕೆ 15 ಎಕರೆ ಭೂಮಿಯಲ್ಲಿ ನಿರ್ಮಾಣಕ್ಕೆ ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಜೊತೆಯಾಗಿ ಪ್ರಮಾಣಿಕ ಪ್ರಯತ್ನ ಮಾಡ್ತೀವಿ ಎಂದರು.

ಎಪಿಎಂಸಿ ನಾಮನಿರ್ದೇಶಿತ ಅಧ್ಯಕ್ಷ ಹರಾಳು ನಂಜಪ್ಪ ಭಿನ್ನವತ್ತಳಿಯನ್ನು ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹಾಗೂ ಮಾಜಿ ಶಾಸಕ ಭೀಮನಾಯ್ಕರಿಗೆ ಅರ್ಪಿಸಿದರು.

ಎಪಿಎಂಸಿ ನಾಮಿನೇಟ ಉಪಾಧ್ಯಕ್ಷ ಎಂ. ಶಿವಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಎಪಿಎಂಸಿ ಅಧ್ಯಕ್ಷ ಹರಾಳು ನಂಜಪ್ಪ. ಉಪಾಧ್ಯಕ್ಷ ಶಿವಣ್ಣ. ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಬದ್ದಿ ರೇಖಾ. ರಾಜ್ಯ ಬೀಜ ನಿಗಮದ ನಿರ್ದೇಶಕ ಸಾವಜ್ಜಿ ರಾಜೇಂದ್ರ ಪ್ರಸಾದ್. ಹಗರಿಬೊಮ್ಮನಹಳ್ಳಿ ಪುರಸಭೆ ಅಧ್ಯಕ್ಷ ಮರಿರಾಮಪ್ಪ. ವರ್ತಕ ಚಾಪಿ ಚಂದ್ರಪ್ಪ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ. ದಾರುಕೇಶ, ಎಪಿಎಂಸಿ ಕಾರ್ಯದರ್ಶಿ ವೀರಣ್ಣ, ಪಂಚಮಸಾಲಿ ಯುವ ಘಟಕ ಅಧ್ಯಕ್ಷ ಶಿವಕುಮಾರ ಗೌಡ, ಎಪಿಎಂಸಿ ನಾಮಿನೇಟ್ ಸದಸ್ಯ ಚಿರಿಬಿ ಕೊಟ್ರೇಶ್, ತಾಪಂ ನಾಮಿನೇಟ್ ಸದಸ್ಯರು ಪರಸಪ್ಪ, ಗಂಗಾದರಪ್ಪ, ಕೊಡದಪ್ಪ ಮುಂತಾದವರಿದ್ದರು.

ಐ. ದಾರುಕೇಶ, ಕರಡಿ ಕೊಟ್ರೇಶ ನಿರ್ವಹಿಸಿದರು.

# ಶಾಂತಿ ಮಾರ್ಗದ ಮೂಲ–ಸಂವಿಧಾನ: ಕೆ.ಪಿ.ಮಂಜುನಾಥ ರೆಡ್ಡಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಭಾರತದ ಸಂವಿಧಾನವು ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನವಾಗಿದ್ದು, ಸರ್ವ ಜನಾಂಗವು ಒಂದಾಗಿ ಬಾಳುವ ಸಂದೇಶ ನೀಡಿದ ಶಾಂತಿ ಮಾರ್ಗದ ಮೂಲವಾಗಿದೆ ಎಂದು ಬಾಲಕೀಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಕೆ.ಪಿ.ಮಂಜುನಾಥ ರೆಡ್ಡಿ ಅವರು ಹೇಳಿದರು.

ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜ್ ಮತ್ತು ರಾಷ್ಟ್ರೀಯಸೇವಾಯೋಜನೆಘಟಕ(ಎನ್ಎಸ್ಎಸ್) ಇವರ ಸಹಯೋಗದಲ್ಲಿ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಿಧಾನ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂವಿಧಾನದ ಆಶಯಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿದಾಗ ಸಮಾಜ ಸುಖಮಯವಾಗಿರುತ್ತದೆ ಎಂದರು.

ಇನ್ನೊರ್ವ ಉಪನ್ಯಾಸಕರಾದ ಶ್ಯಾಮಣ್ಣ ಅವರು ಮಾತನಾಡಿ, ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವಂತೆ ಮಾಡಿದ್ದು ಸಂವಿಧಾನ. ನಮ್ಮ ಸಂವಿಧಾನವು ಮಹಿಳೆಯರು, ತಳ ಸಮುದಾಯ, ನಿರ್ಲ್ಯಕ್ಷಿತ ಸಮುದಾಯಗಳ ಉದ್ದಾರದ ಜೊತೆಗೆ ಸರ್ವರೂ ಸಮನಾಗಿ ಬಾಳಬೇಕೆಂಬ ಧ್ಯೇಯದಿಂದ ಕೂಡಿದ್ದು, ಈ ಮೂಲಕ ಸಮರ್ಥ ರಾಷ್ಟ್ರದ ನಿರ್ಮಾಣದಲ್ಲಿ ಸಂವಿಧಾನ ಮಹತ್ತರ ಪಾತ್ರವಹಿಸಲಿದೆ ಎಂದರು.

ರಾಜ್ಯಶಾಸ್ತ್ರದ ಉಪನ್ಯಾಸಕ ಈರೇಶಪ್ಪ ಅವರು >>4

# ರೈತರು ಸಾವಯವ ಕೃಷಿಗೆ ಆದ್ಯತೆ ನೀಡಿ: ಮಹಾಲಿಂಗಯ್ಯ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ರಾಸಾಯನಿಕ ಗೊಬ್ಬರಗಳನ್ನು ಕೃಷಿಯಲ್ಲಿ ಅತಿಯಾಗಿ ಬಳಸುವುದರಿಂದ ಮಣ್ಣಿನ ಫಲವತ್ತತೆ, ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುತ್ತದೆ. ರೈತರು ಗಂಭೀರವಾಗಿ ಪರಿಗಣಿಸಿ ಸಾವಯವ ಕೃಷಿಗೆ ಆದ್ಯತೆ ನೀಡಬೇಕು ಎಂದು ತಾಲೂಕು ಕೃಷಿ ಮೇಲ್ವಿಚಾರಕ ಮಹಾಲಿಂಗಯ್ಯ ಹೇಳಿದರು.

ಕೂಡ್ಲಿಗಿ ತಾಲೂಕು ಗುಡೇಕೋಟೆ ವಲಯದಲ್ಲಿ ನಡೆದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ರೈತರಿಗಾಗಿ ಕೃಷಿ ವಿಸ್ತರಣಾ ಕಾರ್ಯಕ್ರಮದಲ್ಲಿ ಉದ್ಘಾಟಿಸಿ ಮಾತನಾಡಿದರು. ಕೃಷಿ ಪ್ರಧಾನ ದೇಶದಲ್ಲಿ ಸಾಂಪ್ರದಾಯಿಕ ವೈದ್ಯದ ಪ್ರಕಾರ, ಬಾಳಿ ಬದುಕುತ್ತಿರುವ, ನಮ್ಮ ಕೃಷಿಕರು ಇಂದು ಪುನಃ ಸಂಪ್ರದಾಯಿಕ ಸಿರಿಧಾನ್ಯಗಳನ್ನು ಉಳಿಸಿ ಬೆಳೆಸಲು ಮುಂದಾಗಬೇಕೆಂದು ಕರೆ ನೀಡಿದರು. ಇಂದು ತಂತ್ರಜ್ಞಾನ ಎಷ್ಟೇ ಬೆಳೆದರೂ, ಎಲ್ಲವೂ ನಮ್ಮ ಹಿಂದಿನ ಕಾಲದ ಹಿರಿಯರು ಹಾಕಿಕೊಟ್ಟಿರುವ ಪದ್ಧತಿಯಂತೆ ಬೇಸಾಯ ಪದ್ಧತಿ ಅಳವಡಿಸಿಕೊಂಡು, ಸಿರಿ ಧಾನ್ಯಗಳನ್ನು ಹೆಚ್ಚಾಗಿ ಬೆಳೆದು ಉತ್ಪಾದನೆ ಮಾಡುವುದರ ಮೂಲಕ, ರೈತರು ಆರ್ಥಿಕ ಅಭಿವೃದ್ಧಿಯನ್ನು ಹೊಂದಬೇಕಾಗಿದೆ ಸಿರಿಧಾನ್ಯಗಳ ಬಳಕೆಯಿಂದ ಯಾವುದೇ ರೋಗ ರುಜನಿಗಳು ಇಲ್ಲದೆ ಆರೋಗ್ಯ ವಂತ ಜೀವನವನ್ನು ಸಾಗಿಸಲು ಸಾಧ್ಯವಾಗುವುದು ಎಂದು ಹೇಳಿದರು. ಗುಡೇಕೋಟೆ ವಲಯ ಮೇಲ್ವಿಚಾರಕ ಕರಿಯಪ್ಪ, ಗ್ರಾಮದ ಮುಖಂಡರು ಸೇವಾ ಪ್ರತಿನಿಧಿಗಳಾದ ರೂಪಾ ಕೋಟಿಲಿಂಗಪ್ಪ, ನವೀನ್ ತಾಜ್, ನೇತ್ರಾವತಿ, ಬೊಡುಲಕ್ಷ್ಮೀದೇವಿ, ಕವಿತಾ, ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಸ್ನೇಹ ಅಜರಾಮರ, ಚೈತನ್ಯದಾಯಕ

## ಬಾಲ್ಯ ನೆನೆದು ಭಾವುಕರಾದ ಹಳೇಯ ವಿದ್ಯಾರ್ಥಿಗಳು | ಗುರುವೃಂದಕೆ ಪುಷ್ಪಾರ್ಚನೆ

## ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಹುಡೇದ್ ಗುರುಬಸವರಾಜ ಇಂಗಿತ




■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಹಳೇವೂರಿನ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬರೋಬ್ಬರಿ 40 ವರ್ಷಗಳ ಬಳಿಕ ಶಾಳೆಯ ಹಳೇಯ ವಿದ್ಯಾರ್ಥಿಗಳು ಸ್ನೇಹ ಸಮ್ಮಿಲನದಲ್ಲಿ ತಮ್ಮ ಬಾಲ್ಯ ನೆನೆದು ಬಾವುಕರಾದರು. ಅಕ್ಷರಶಃ ಮಕ್ಕಳಂತೆ ಕೆಲವರ ಕಣ್ಣುಗಳ ತೇವವಾದರೆ, ಹಲವರು ಚಿಣ್ಣರಂತೆ ಶಾಲೆಯೊಂದಿಗಿನ ತಮ್ಮ ಬಾಲ್ಯದ ನೆನಪಿನ ಬುತ್ತಿಯನ್ನು ಕುಟುಂಬ ಸದಸ್ಯರೊಂದಿಗೆ ಹಂಚಿಕೊಂಡರು.


ಶಾಲೆಯಲ್ಲಿನ 1983–84ನೇ ಸಾಲಿನ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮತ್ತು ಗುರುವಂದನೆ ಕಾರ್ಯಕ್ರಮ ಹಳೇಯ ವಿದ್ಯಾರ್ಥಿಗಳನ್ನು ಕೆಲ ಕಾಲ ಚಿಣ್ಣರಂತಾಗಿಸಿತ್ತು. ಗುರುವೃಂದವನ್ನು ಪುಷ್ಪಾರ್ಚನೆ ಮೂಲಕ ವಿನಯಪೂರ್ವಕ ಸ್ವಾಗತ ಕೋರಿದರು. ಸಾಲಾಗಿ ನಿಂತು ನಾಡಗೀತೆ ಹಾಡಿದರು. ಹೊಸಪೇಟೆ ವಿಜಯನಗರ ಕಾಲೇಜ್‌ನ ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಶಿವಾನಂದ ಮಾತನಾಡಿ, ಬಾಲ್ಯದ ನೆನಪುಗಳು ಬದುಕಿನ ಬಹು ದೊಡ್ಡ ಆಸ್ತಿಯಾಗಿದೆ. ಅನುಭವಗಳನ್ನು ಹಂಚಿ ಕೊಳ್ಳುವ ಮೂಲಕ ಕಿರಿಯರಿಗೆ ಉತ್ತಮ ಮಾರ್ಗದರ್ಶನ ಮಾಡಬೇಕು ಎಂದರು.

ಗುರುವಂದನೆ ನಿಮಿತ್ತ ಅಂದಿನ ಶಿಕ್ಷಕರಾದ ಟಿ.ಎಂ. ಸದ್ಯೋಜಾಥಯ್ಯ, ಸುಭಾಷ್ ಚಂದ್ರಯ್ಯ, ಎಚ್.ಪತ್ರೆಪ್ಪ, ಬಿ.ವೀರಣ್ಣ, ದೈಹಿಕ ಶಿಕ್ಷಕ ವಿ.ಎಸ್.ಮಲ್ಲಿಕಾರ್ಜುನ ಇವರನ್ನು ಸನ್ಮಾನಿಸಿದರು.

### 40 ವರ್ಷಗಳ ಬಳಿಕ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ

ಶಾಲೆಯ ಹಳೇಯ ವಿದ್ಯಾರ್ಥಿಗಳಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜೆ.ಎಂ. ವೀರಸಂಗಯ್ಯ, ಮಾಜಿ ಯೋಧ ಯು. ಎಸ್.ಮಹಾದೇವ, ನಿವೃತ್ತ ಶಿಕ್ಷಕ ಎಂ. ಶಂಭುಲಿಂಗಪ್ಪ ಇವರನ್ನು ಸನ್ಮಾನಿಸಿದರು. ಮಾಜಿ ಯೋಧ ವಿ.ಎಂ.ಕೊಟ್ರೇಶ್, ಎಇಇ ಅಂಬಿಗರ ಬಸವರಾಜ, ಶಿಕ್ಷಕರಾದ ನಾಗರಾಜ, ಮಹಮದ್ ರಫಿ, ಸಹಪಾಠಿ ಆಶಾ ಕಾರ್ಯಕರ್ತೆ ಕಸ್ತೂರಮ್ಮ, ಅಂಗನವಾಡಿ ಕಾರ್ಯಕರ್ತೆಯಾದ ಮೀನಾ ಕ್ಷಮ್ಮ, ಶಾಂಭವಿ ಇವರನ್ನು ಗೆಳೆಯರು ಸನ್ಮಾನಿಸಿ, ಸಂತಸಪಟ್ಟರು.

ಹಳೇಯ ವಿದ್ಯಾರ್ಥಿ, ರೈತಸೇವಾ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಹುಡೇದ್ ಗುರುಬಸವರಾಜ ಪ್ರಾಸ್ತಾವಿಕ ಮಾತನಾಡಿ, ಪ್ರಾಥಮಿಕ ಶಾಲೆಯಲ್ಲಿ ಉತ್ತಮ ಶಿಕ್ಷಣ ನೀಡಿದ ಗುರುಗಳನ್ನು ಸ್ಮರಿಸುವ ಹಿನ್ನೆಲೆ ಯಲ್ಲಿ ಗುರುವಂದನೆ ಆಯೋಜಿಸಿದೆ. ಯಾಂತ್ರಿಕ ಬದುಕಿನಲ್ಲಿ ಬಾಲ್ಯದ ನೆನಪುಗಳನ್ನು ಮರುಕಳಿಸುವ ಮೂಲಕ ಎಲ್ಲ ಗೆಳೆಯರು ಒಂದೆಡೆ ಸೇರಿ ಸಂಭ್ರ ಮಿಸಿದ ಖುಷಿ ಇದೆ. ಸ್ನೇಹ ಅಜರಾಮರ ಮತ್ತು ಚೈತನ್ಯದಾಯಕ ಎಂದರು. ಸಹಪಾಠಿಗಳಾದ ಮಹಮದ್ ರಫಿ, ಎಸ್.ಎಂ.ನಾಗರಾಜ, ಎನ್.ವಿ.ರವಿ, ಪದ್ಮರಾಜು ಸಪ್ತಸಾಗರ, ಬಿ.ವಿನೋದ, ಚಂದ್ರಕಲಾ ನಿರ್ವಹಿಸಿದರು.



# SSLC

## ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ


ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು

3) ರಶೀದ್ ಅವರು ತಮ್ಮ ಹುಟ್ಟುಹಬ್ಬದ ಉಡುಗೊರೆಯಾಗಿ ಪ್ಲೇಯಿಂಗ್ ಟಾಪ್ (ಲಟ್ಟು) ಪಡೆದರು, ಆಶ್ಚರ್ಯಕರವಾಗಿ ಅದರ ಮೇಲೆ ಯಾವುದೇ ಬಣ್ಣವಿಲ್ಲ. ಅವನು ಅದನ್ನು ತನ್ನ ಬಳಪಗಳಿಂದ ಬಣ್ಣ ಮಾಡಲು ಬಯಸಿದನು. ಮೇಲ್ಭಾಗವು ಅರ್ಧಗೋಳದಿಂದ ಆರೋಹಿಸಲ್ಪಟ್ಟ ಕೋನ್ ಆಕಾರದಲ್ಲಿದೆ. ಸಂಪೂರ್ಣ ಮೇಲ್ಭಾಗವು 5 ಸೆಂ.ಮೀ ಎತ್ತರದಲ್ಲಿದೆ, ಮತ್ತು ಮೇಲ್ಭಾಗದ ವ್ಯಾಸವು 3.5 ಸೆಂ.ಮೀ. ಅವನು ಬಣ್ಣ ಮಾಡಬೇಕಾದ ವಿಸ್ತೀರ್ಣವನ್ನು ಹುಡುಕಿ. ($\pi = 22/7$ ತೆಗೆದುಕೊಳ್ಳಿ)

ಪರಿಹಾರ : ಆಟಿಕೆ TSA = ಅರ್ಧಗೋಳದ CSA + ಶಂಕುವಿನ CSA

4) ಚಿತ್ರದಲ್ಲಿ ತೋರಿಸಿರುವಂತೆ ಒಂದು ತುದಿಯಲ್ಲಿ ಅರ್ಧಗೋಳದ ಖಿನ್ನತೆಯನ್ನು ಹೊಂದಿರುವ ಸಿಲಿಂಡರ್‌ನ ಆಕಾರದಲ್ಲಿ ಮಯಾಂಕ್ ತನ್ನ ಉದ್ಯಾನವನದಲ್ಲಿ ಪಕ್ಷಿಗಳಿಗಾಗಿ ಒಂದು ಕೊಳ ಮಾಡಿದ್ದಾನೆ ಮಾಡಿದ್ದಾನೆ. ಸಿಲಿಂಡರ್ ನ ಎತ್ತರವು 1.45 ಮೀ, ಮತ್ತು ಅದರ ತ್ರಿಜ್ಯವು 30 ಸೆಂ. ಪಕ್ಷಿಗಳ ಕೊಳದ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi = 22/7$ ತೆಗೆದುಕೊಳ್ಳಿ)





ಪರಿಹಾರ : ಪಕ್ಷಿ ಕೊಳದ ಒಟ್ಟು ಮೇಲ್ಮೈ ವಿಸ್ತೀರ್ಣ = ಸಿಲಿಂಡರ ನ CSA + ಅರ್ಧಗೋಳದ CSA

5) $64 cm^3$ ಘನಫಲವನ್ನು ಹೊಂದಿರುವ ಎರಡು ವರ್ಗ ಘನಗಳ ಮುಖಗಳನ್ನು ಸೇರಿಸಿ ಒಂದು ಆಯತ ಘನಾಕೃತಿ ಮಾಡಿದೆ. ಈ ಆಯತ ಘನಾಕೃತಿಯ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಸುಳುಹು : ಮೊದಲು ಘನದ ಬಾಹು ಕಂಡುಹಿಡಿಯಿರಿ ನಂತರ ಆಯತ ಘನದ ಸೂತ್ರ ಬಳಸಿ ಪರಿಹರಿಸಿ.

6) ಪ್ರತಿ ಅಂಚು 7cm ಹೊಂದಿರುವ ವರ್ಗ ಘನಾಕೃತಿಯ ಒಂದು ವಸ್ತುವಿನ ಮೇಲ್ಮುಖದ ಮೇಲೆ ಅರ್ಧಗೋಳವು ಇರಿಸಿದೆ. ಅರ್ಧಗೋಳದ ಗರಿಷ್ಠ ವ್ಯಾಸವನ್ನು ಕಂಡುಹಿಡಿಯಿರಿ?





ಈ ಪೂರ್ಣ ಘನಾಕೃತಿಯ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

**ಪರಿಹಾರ :** ಅರ್ಧಗೋಳದ ಗರಿಷ್ಠ ವ್ಯಾಸ = ವರ್ಗಾಕೃತಿಯ ಬಾಹು = 7 ಸೆಂ.ಮೀ.

ಘನಾಕೃತಿಯ ಮೇಲ್ಮೈವಿಸ್ತೀರ್ಣ
= ವರ್ಗಘನದ ಮೇಲ್ಮೈವಿಸ್ತೀರ್ಣ + ಅರ್ಧಗೋಳದ ಪಾರ್ಶ್ವಮೇಲ್ಮೈ ವಿಸ್ತೀರ್ಣ
- ಅರ್ಧಗೋಳದ ವೃತ್ತಾಕಾರದ ಪಾದದ ವಿಸ್ತೀರ್ಣ

7) ಒಂದು ಔಷದದ ಕ್ಯಾಪ್ಸುಲ್‌ನ ಆಕಾರವು ಒಂದು ಸಿಲಿಂಡರಿನ ಪ್ರತಿ ಪಾದಗಳಲ್ಲಿ ಎರಡು ಅರ್ಧಗೋಳವನ್ನು ಅಂಟಿಸಿದೆ. ಕ್ಯಾಪ್ಸುಲ್‌ನ ಸಂಪೂರ್ಣ ಉದ್ದವು 14 mm ಮತ್ತು ಅದರ ವ್ಯಾಸವು 5 mm ಇದೆ. ಅದರ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.





ಕ್ಯಾಪ್ಸೂಲ್‌ನ ಮೇಲ್ಮೈ ವಿಸ್ತೀರ್ಣ = 2 ಅರ್ಧಗೋಳಗಳ ಪಾರ್ಶ್ವ ಮೇಲ್ಮೈವಿಸ್ತೀರ್ಣ + ಸಿಲಿಂಡರಿನ ಪಾರ್ಶ್ವ ಮೇಲ್ಮೈವಿಸ್ರೀರ್ಣ

8) ಒಂದು ಘನದಲ್ಲಿ ಅರ್ಧಗೋಳದ ವೃತ್ತಾಕಾರದ ಪಾದದ ಮೇಲೆ ಸಂಪೂರ್ಣವಾಗಿ ಆವರಿಸುವಂತೆ ಶಂಕುವು ನಿಂತಿದೆ. ಅವು ಗ ¼ ತ್ರಿಜ್ಯಗಳು 1 ಸೆಂ.ಮೀ ಮತ್ತು ಶಂಕುವಿನ ಎತ್ತರವು ಅದರ ತ್ರಿಜ್ಯಕ್ಕೆ ಸಮನಾಗಿದೆ. ಈ ಘನದ ಘನಫಲವನ್ನು π ನಲ್ಲಿ ವ್ಯಕ್ತಪಡಿಸಿರಿ.

ಘನಫಲ = ಶಂಕುವಿನ ಘನಫಲ + ಅರ್ಧಗೋಳದ ಘನಫಲ

9) ಒಂದು ಕಬ್ಬಿಣದ ಕಂಬದ ಎತ್ತರವು 220 ಛ cm ಮತ್ತು ಅದರ ಪಾದದ ವ್ಯಾಸವು 24 ಛ cm ಆಗಿರುವ ಘನ ಸಿಲಿಂಡರಿನಾಕಾರದಲ್ಲಿ ಇದೆ. ಇದರ ಮೇಲೆ 60cm ಎತ್ತರ ಮತ್ತು ತ್ರಿಜ್ಯ 8 ಛ cm ಇರುವ ಮತ್ತೊಂದು ಸಿಲಿಂಡರ್ ಜೋಡಿಸಲಾಗಿದೆ. 1 ಛ cm 3 ಕಬ್ಬಿಣದ ಸರಿಸುಮಾರು ದ್ರವ್ಯರಾಶಿಯು 8g ಆದರೆ ಕಂಬದ ದ್ರವ್ಯರಾಶಿಯನ್ನುಕಂಡುಹಿಡಿಯಿರಿ. ( $\pi = 3.14$ ಎಂದು ತೆಗೆದುಕೊಳ್ಳಿ)




ಕಂಬದ ಒಟ್ಟು ಘನಫಲ = ದೊಡ್ಡ ಕಂಬದ ಗಾತ್ರ + ಚಿಕ್ಕ ಕಂಬದ ಗಾತ್ರ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**27–11–2024 – ಬುಧವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಆಯುಷ್ಮಾನ್ |
| ಕರಣ | : ಕೌಳವ |
| ಸೂರ್ಯೋದಯ | : 06:50:05 |
| ಸೂರ್ಯಾಸ್ತ | : 17:39:09 |
| ರಾಹು ಕಾಲ | : 12:15–13:36 |
| ಯಮಘಂಡ ಕಾಲ | : 08:11–09:32 |
| ಗುಳಿಕ ಕಾಲ | : 10:53–12:15 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 26–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.24 ಅಡಿ |
| ಒಳ ಹರಿವು | 3287 ಕ್ಯುಸೆಕ್ |
| ಹೊರ ಹರಿವು | 6968 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 94.971 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1595.33 ಅಡಿ |
| ಒಳ ಹರಿವು | 513 ಕ್ಯುಸೆಕ್ |
| ಹೊರ ಹರಿವು | 9631 ಕ್ಯುಸೆಕ್ |
| ಸಾಮರ್ಥ್ಯ | 16.063 ಟಿಎಂಸಿ |

# ನೂರೊಂದು ಸರ್ಕಾರಿ ನೌಕರರ ಬಿಪಿಎಲ್ ಕಾರ್ಡ್ ರದ್ದಿಗೆ ಕ್ರಮ

## ಡಿಸಿ ಎಂ.ಎಸ್. ದಿವಾಕರ ಹೇಳಿಕೆ | ಆಸ್ಪತ್ರೆ, ಶಾಲೆ, ದೇಗುಲಕ್ಕೆ ಭೇಟಿ

**ಹಂಪಿ ಟೈಮ್ಸ್ ಹರಪನಹಳ್ಳಿ**

ಮಕ್ಕಳ ಕಾಯಿಲೆಗೆ ಸಂಬಂಧಿಸದಂತೆ ಔಷಧಿಗಳ ಕೊರತೆ ಇದ್ದಲ್ಲಿ ಪಟ್ಟಿ ತಯಾರಿಸಿ ಪ್ರಸ್ತಾವನೆ ಕಳಿಸಿದರೆ ಕೂಡಲೇ ವ್ಯವಸ್ಥೆ ಮಾಡಲಾಗುವುದು. ಈಗಿರುವ ಎರಡು ಡಯಾಲಿಸಿಸ್ ಯಂತ್ರದ ಜೊತೆಗೆ ಇನ್ನೊಂದು ಪಾಸಿಟಿವ್ ಡಯಾಲಿಸಿಸ್ ಯಂತ್ರವನ್ನು ಒಂದು ವಾರದಲ್ಲಿ ನೀಡಲಾಗುವುದು. ಆಸ್ಪ್ರೆಗೆ ಬರುವ ರೋಗಿಗಳಿಗೆ ಸಾಕಷ್ಟು ಸಮಯ ನಿಲ್ಲುವ ಶಕ್ತಿ ಇರದು, ಟೋಕನ್ ವ್ಯವಸ್ಥೆ ಮಾಡಿ, ಕೂಡಲು ಆಸನದ ವ್ಯವಸ್ಥೆ ಮಾಡಬೇಕು ಎಂದು ವೈದ್ಯರಿಗೆ ಖಡಕ್ ಸೂಚನೆ ನೀಡಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮಂಗಳವಾರ ದಿಢೀರನೆ ಭೇಟಿ ನೀಡಿ, ವಿವಿಧ ವಾರ್ಡುಗಳನ್ನು ಪರಿಶೀಲಿಸಿದರು. ಮಕ್ಕಳ ಕಾಯಿಲೆಗಳ ಔಷಧಿಗಳ ಬಗ್ಗೆ ಮಾಹಿತಿ ಪಡೆದು ನಿಮ್ಮ ಬಳಿ ಸಿಗದಿರುವ ಪ್ರಮುಖ ಔಷಧಿಗಳ ಬಗ್ಗೆ ಬೇಡಿಕೆ ಸಲ್ಲಿಸಿ ಎಂದು ಮಕ್ಕಳ ತಜ್ಞರಾದ ದತ್ತಾತ್ರೇಯ ಪಿ.ಸಿ. ಅವರಿಗೆ ಸೂಚಿಸಿದರು.ತುರ್ತು ಚಿಕಿತ್ಸೆ ಘಟಕದಲ್ಲಿ ಮಹಿಳಾ ರೋಗಿಗಳಿಗೆ ಚಿಕಿತ್ಸೆ ನೀಡಲು ಪ್ರತ್ಯೇಕ ಕರ್ಟನ್ ಅಳವಡಿಸಲು ಡಾಕ್ಟರ್ ಶಂಕರ್ ನಾಯ್ಕ ಅವರಿಗೆ ಸೂಚಿಸಿದರು. ವಿವಿಧ ವಾರ್ಡುಗಳ ಬಳಿ ಚಿಕಿತ್ಸೆಗೆ ಎಂದು ನಿಂತಿರುವ ಅನೇಕ ಮಹಿಳೆಯರು ವೃದ್ಧಿಯನ್ನು ನೋಡಿದ ಡಿಸಿ ಅವರು ಸ್ಟೀಲ್ ಬೆಂಚ್ ಹಾಕಿಸಿ ಕೋರಿಸಿದರು. ಉಪಯೋಗಿಸದೇ ಇರುವ ಸ್ಕ್ಯಾನಿಂಗ್ ಮಷಿನ್ನು ಸರಿಪಡಿಸಿ ಮೂರು ದಿನಗಳೊಳಗಾಗಿ ಉಪಯೋಗಿಸಿ ರೋಗಿಗಳಿಗೆ ಹೊರಗಡೆ ಸ್ಕ್ಯಾನಿಂಗ್ ಮಾಡಿಸಲು ತಿಳಿಸದಂತೆ ನಿರ್ದೇಶಿಸಿ, ಈ ಸಂಬಂಧ ಗೋಡೆ ಫಲಕಗಳನ್ನು ಹಾಕುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಕ್ತ ಪರೀಕ್ಷೆ ಕೇಂದ್ರದಲ್ಲಿ ಉಪಯೋಗಿಸದೇ ಇರುವ ಹೊಸ ರಕ್ತ ಪರೀಕ್ಷೆ ಮಷಿನ್ನು ಪರಿಶೀಲಿಸಿ ಸದರಿ ಉಪಕರಣ ಉಪಯೋಗಿಸಲು ಸಿಬ್ಬಂದಿಯನ್ನು ಹಡಗಲಿ ಸರಕಾರಿ ಆಸ್ಪತ್ರೆಗೆ ಕಳುಹಿಸಿ ಅಗತ್ಯ ತರಬೇತಿ ಪಡೆದು ಇದೇ ಉಪಕರಣದಲ್ಲಿ ರೋಗಿಗಳ ರಕ್ತ ಮಾದರಿಗಳಿಗೆ ರಕ್ತ ಪರೀಕ್ಷೆ ಮಾಡುವಂತೆ ಎಚ್ಚರಿಕೆ ನೀಡಲಾಯಿತು. ತುರ್ತು ಚಿಕಿತ್ಸಾ ಘಟಕದಲ್ಲಿ ಮಹಿಳಾ ಹಾಗೂ ಪುರುಷ ರೋಗಿಗಳಿಗೆ ಪ್ರತ್ಯೇಕಗೊಳಿಸಲು ಪರದೆ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿದರು.

ತಾಲೂಕು ಕಛೇರಿ ಹರಪನಹಳ್ಳಿಗೆ ಅನಿರೀಕ್ಷಿತ ಭೇಟಿ ನೀಡಿ ಸದರಿ ಕಛೇರಿಯಲ್ಲಿ ಇ–ಆಫೀಸ್ ನಲ್ಲಿ ಬಾಕಿ ಇರುವ ಕಡತಗಳನ್ನು ಕೂಡಲೇ ವಿಲೇ ಮಾಡುವಂತೆ ಎಚ್ಚರಿಕೆ ನೀಡಲಾಯಿತು ಹಾಗೂ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಕೆಲವು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದರು.



ಶಾಲೆಗೆ ಭೇಟಿ: ಮಳೆಯಿಂದಾಗಿ ಸೋರುತ್ತಿರುವ ಶಾಲೆಗಳ ಪಟ್ಟಿಯನ್ನು ತಯಾರಿಸಿಕೊಂಡಿದ್ದು, ಎಲ್ಲಾ ಶಾಲೆಗಳಿಗೂ ಮಳೆಯಿಂದಾಗಿ ಸೋರುವುದನ್ನು ತಡೆಯಲು ವಿವಿಧ ಯೋಜನೆಗಳಡಿಯಲ್ಲಿ ರಿಪೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರ ಭಾಗವಾಗಿ ಹರಪನಹಳ್ಳಿ ವ್ಯಾಪ್ತಿಯ ಶಾಲೆಗಳಿಗೆ ಅನಿರೀಕ್ಷಿತವಾಗಿ ಜಿಲ್ಲಾಧಿಕಾರಿಗಳು ಭೇಟಿ ಮಾಡಿ ಮಕ್ಕಳೊಂದಿಗೆ ಚರ್ಚಿಸಿದರು. ಮತ್ತು ರಿಪೇರಿ ಕಾಮಗಾರಿಗಳನ್ನು ಪರಿಶೀಲನೇ ಮಾಡಿ ಶಿಕ್ಷಕರೊಂದಿಗೆ ಮೂಲಭೂತ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದರು.

ತಾಲೂಕು ಮಿನಿ ವಿಧಾನಸೌಧಕ್ಕೆ ಭೇಟಿ : ವಿವಿಧ ಇಲಾಖೆಯ ಕಡತಗಳ ಬಗ್ಗೆ ಕಂದಾಯ. ಪಹಣಿ. ಆಹಾರ ಇಲಾಖೆ. ಚುನಾವಣೆ ಇಲಾಖೆ. ಪೆನ್ಷನ್. ಭೂಮಿ ಮಾಪನ ಇಲಾಖೆ ಭೇಟಿ ನೀಡಿ, ಪರಿಶೀಲಿಸಿ ಸಾರ್ವಜನಿಕರವನ್ನು ಅಲೆದಾಡಿಸದಂತೆ ಕಾರ್ಯನಿರ್ವಹಿಸಲು ಸೂಚಿಸಿದರು.

> **ತಾಲೂಕಿನಲ್ಲಿ 101 ಸರಕಾರಿ ನೌಕರ ಬಿಪಿಎಲ್ ಕಾರ್ಡ್ ಹೊಂದಿದ್ದು, ಅವರ ಕಾರ್ಡುಗಳನ್ನು ರದ್ದುಪಡಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಸಾಫ್ಟ್ ವೇರ್ ನಲ್ಲಿ ಅಮಾನತ್ತುಗೊಂಡ ಎಲ್ಲಾ ಕಾರ್ಡುಗಳನ್ನು ಚಾಲ್ತಿಗೊಳಿಸಿರುವುದರಿಂದ ನ್ಯಾಯಬೆಲೆ ಅಂಗಡಿಯ ವರ್ತಕರು ತಾಲೂಕು ಕಛೇರಿಗೆ ಪಡಿತರ ಚೀಟಿದಾರರನ್ನು ಅಲೆದಾಡಿಸದಂತೆ ನಿಯಮಾನುಸಾರ ರೇಷನ್ ವಿತರಣೆ ಮಾಡುವಂತೆ ನ್ಯಾಯಬೆಲೆ ಅಂಗಡಿ ವರ್ತಕರಿಗೆ ತಿಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.**
>
> **ಎಂ.ಎಸ್.ದಿವಾಕರ,**
> ಜಿಲ್ಲಾಧಿಕಾರಿ, ವಿಜಯನಗರ

ದೇವರ ತಿಮ್ಮಾಲಪುರ ದೇವಸ್ಥಾನಕ್ಕೆ ಬೇಟಿ: ಜಿಲ್ಲಾಧಿಕಾರಿಗಳು ದೇವರ ತಿಮಲಾಪುರ ಗ್ರಾಮದ ವೆಂಕಟೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದು, ಸದರಿ ದೇವಸ್ಥಾನವು ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯಿಂದ ನಿರ್ವಹಣೆಯಾಗುತ್ತಿದ್ದು, ಮುಂಬರುವ ಜಾತ್ರೋತ್ಸವ ನಿಮಿತ್ಯ ಮೂಲಭೂತ ಸೌಕರ್ಯಗಳು ಮತ್ತು ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಕೂಡಲೇ ಪೂರ್ಣಗೊಳಿಸುವಂತೆ ಸ್ಥಳೀಯ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿ ಶಾಂತಿಯುತವಾಗಿ ದೇವರ ಕಾರ್ಯಕ್ರಮಗಳನ್ನು ನೆರವೇರಿಸಲು ಮತ್ತು ಸೇವಾ ಚೀಟಿ ವಿತರಣೆಗಾಗಿ ಗಣಕೀಕೃತ ರಸೀದಿ ವ್ಯವಸ್ಥೆಯನ್ನು ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಲಿಕೆಯಲ್ಲಿ ಯಾರು ಹಿಂದುಳಿದಿರುತ್ತಾರೆ ಅಂತಹ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಿಗೆ ನೇಮಕ ಮಾಡಲಾಗಿದೆ. ಪ್ರತಿ ವಿದ್ಯಾರ್ಥಿಗಳಿಗೆ 5 ಗಂಟೆಗೆ ಫೋನ್ ಮಾಡಿ ಏದ್ದೇಳಿಸುವುದು. 15 ದಿನ ಮತ್ತು ಒಂದು ತಿಂಗಳಿಗೆ ಪರೀಕ್ಷೆ ನಡೆಸುವುದು. ಪರೀಕ್ಷೆಯಲ್ಲಿ ಏನ್ ತಪ್ಪು ಮಾಡಿದ್ದಾರೆ ಎಂದು ಅವರ ಎದುರಿಗೆ ತಿಳಿಸುವುದು. ನಿರಂತರ ಹಾಜರಾಗದೇ ಇರುವ ವಿದ್ಯಾರ್ಥಿಗಳಿಗೆ ಹಾಲ್ ಟೀಕೆಟ್ (ಪ್ರವೇಶ ಪತ್ರ) ನೀಡಲಾಗುವುದಿಲ್ಲ. 1 ಸಾವಿರ 800 ನೂರು ಮಕ್ಕಳು ಗೈರು ಹಾಜರುಗುತ್ತಿದ್ದಾರೆ. 4 ಸಾವಿರದ 600 ನೂರು ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಇವರನ್ನ ಗುರಿ ಮಾಡಿ ಕೊಂಡು, ಸರಕಾರಿ, ಖಾಸಗಿ, ಅನುದಾನಿತ, ಅನುದಾನ ರಹಿತ 336 ಶಾಲೆಗಳ ಶಿಕ್ಷಕರು ಕನ್ನಡ ಇಂಗ್ಲೀಷ್, ವಿಜ್ಞಾನ, ಗಣಿತ, ಸಮಾಜ ಹಾಗೂ ಹಿಂದಿ ವಿಷಯಗಳ ಕುರಿತು ವಿದ್ಯಾರ್ಥಿಗಳ ಕಲಿಕೆ ಒತ್ತು ಕೊಡಲಾಗುವುದು ಎಂದು ತಿಳಿಸಿದರು.



**ಶಾಲೆಗೆ ಭೇಟಿ:** ಮಳೆಯಿಂದಾಗಿ ಸೋರುತ್ತಿರುವ ಶಾಲೆಗಳ ಪಟ್ಟಿಯನ್ನು ತಯಾರಿಸಿಕೊಂಡಿದ್ದು, ಎಲ್ಲಾ ಶಾಲೆಗಳಿಗೂ ಮಳೆಯಿಂದಾಗಿ ಸೋರುವುದನ್ನು ತಡೆಯಲು ವಿವಿಧ ಯೋಜನೆಗಳಡಿಯಲ್ಲಿ ರಿಪೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರ ಭಾಗವಾಗಿ ಹರಪನಹಳ್ಳಿ ವ್ಯಾಪ್ತಿಯ ಶಾಲೆಗಳಿಗೆ ಅನಿರೀಕ್ಷಿತವಾಗಿ ಜಿಲ್ಲಾಧಿಕಾರಿಗಳು ಭೇಟಿ ಮಾಡಿ ಮಕ್ಕಳೊಂದಿಗೆ ಚರ್ಚಿಸಿದರು. ಮತ್ತು ರಿಪೇರಿ ಕಾಮಗಾರಿಗಳನ್ನು ಪರಿಶೀಲನೇ ಮಾಡಿ ಶಿಕ್ಷಕರೊಂದಿಗೆ ಮೂಲಭೂತ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದರು.

**ತಾಲೂಕು ಮಿನಿ ವಿಧಾನಸೌಧಕ್ಕೆ ಭೇಟಿ:** ವಿವಿಧ ಇಲಾಖೆಯ ಕಡತಗಳ ಬಗ್ಗೆ ಕಂದಾಯ. ಪಹಣಿ. ಆಹಾರ ಇಲಾಖೆ. ಚುನಾವಣೆ ಇಲಾಖೆ. ಪೆನ್ಷನ್. ಭೂಮಿ ಮಾಪನ ಇಲಾಖೆ ಭೇಟಿ ನೀಡಿ, ಪರಿಶೀಲಿಸಿ ಸಾರ್ವಜನಿಕರವನ್ನು ಅಲೆದಾಡಿಸದಂತೆ ಕಾರ್ಯನಿರ್ವಹಿಸಲು ಸೂಚಿಸಿದರು.

## ಬಳ್ಳಾರಿ ಜಿಲ್ಲಾ ಆಸ್ಪತ್ರೆ; ಹೆರಿಗೆಗೆ ದಾಖಲಾಗಿದ್ದ ಬಾಣಂತಿಯ ಮರಣ : ಜಿಲ್ಲಾ ಶಸ್ತ್ರಚಿಕಿತ್ಸಕರ ಸ್ಪಷ್ಟನೆ

**ಹಂಪಿ ಟೈಮ್ಸ್ ಬಳ್ಳಾರಿ**


ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ನ.07 ರಿಂದ 13 ರವರೆಗೆ ಹೆರಿಗೆಗಾಗಿ ದಾಖಲಾದ 09 ಬಾಣಂತಿಯರ ಪೈಕಿ ಮುಸ್ಕಾನ್ ಇವರು ನ.11 ರಂದು ಹೆರಿಗೆಗಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿ ಅದೇ ದಿನದಂದು ಹೆರಿಗೆಯಾಗಿ ನಂತರ ತೀವ್ರ ಸ್ಥಿತಿಯಲ್ಲಿದ್ದ ಬಾಣಂತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಮ್ಸ್‌ಗೆ ದಾಖಲಿಸಿದ್ದು, ಅಲ್ಲಿಂದ ಮರುದಿನ ನ.12 ರಂದು ಸ್ವ–ಇಚ್ಛೆಯ ಮೇರೆಗೆ ಡಿಸ್ಚಾರ್ಜ್ ಆಗಿ ಬಳ್ಳಾರಿ ನಗರದ ಖಾಸಗಿ ಆಸ್ಪತ್ರೆ (ಬಳ್ಳಾರಿ ಹೆಲ್ತ್ ಸಿಟಿ ಆಸ್ಪತ್ರೆ) ಯಲ್ಲಿ ದಾಖಲಾಗಿ ಐಸಿಯು ಘಟಕದಲ್ಲಿ ಚಿಕಿತ್ಸೆ ಪಡೆದಿದ್ದು, ಆದಾಗ್ಯೂ ಬಾಣಂತಿಯ ಬಹು ಅಂಗಾಂಗಳ ವೈಫಲ್ಯದಿಂದಾಗಿ ನ.25 ರಂದು ಸಂಜೆ 06 ಗಂಟೆಗೆ ಮರಣ ಹೊಂದಿರುತ್ತಾರೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕರು ತಿಳಿಸಿದ್ದಾರೆ.

## ಶಾಂತಿ ಮಾರ್ಗದ ಮೂಲ ಸಂವಿಧಾನ

ಮೊದಲ ಪುಟದಿಂದ

ಮಾತನಾಡಿ ಸಂವಿಧಾನದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಮೂಲಭೂತ ಹಕ್ಕು ನೀಡಿರುವುದರ ಜೊತೆಗೆ ಕರ್ತವ್ಯಗಳನ್ನೂ ನೀಡಿದೆ. ಸಾರ್ವಜನಿಕರು ಅವುಗಳ ಅರಿಯುವ ಅಗತ್ಯತೆ ಇದೆ ಎಂದರು.

ಸಂವಿಧಾನವು ಭಾರತೀಯರೆಲ್ಲರಿಗೂ ಪವಿತ್ರವಾದ ಗ್ರಂಥವಾಗಿದೆ. ಕೆಳವರ್ಗದ ಕೆಲಜನರಿಗೆ ಕನಸು ಕಾಣುವ ಅವಕಾಶ ವಿಲ್ಲದ ಕಾಲದಲ್ಲಿ ಸಂವಿ ಧಾನದ ಮೂಲಕ ವಾಸ್ತವತೆಯನ್ನು ಜನರಿಗೆ ಸಾಕಾರ ಮಾಡಿಕೊಳ್ಳಲು ಅವಕಾಶ ನೀಡಿದೆ ಎಂದರು.




ಇದೇ ವೇಳೆ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಪುಷ್ಪಾರ್ಚನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂವಿಧಾನ ಪ್ರಸ್ತಾವನೆ ಭೋದಿಸಲಾಯಿತು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಹೆಚ್.ಎಂ.ಜ್ಯೋತಿ, ಡಾ.ಯು.ಶ್ರೀನಿವಾಸ ಮೂರ್ತಿ, ಚಾಂದ್‌ಪಾಷಾ, ರಾಘವೇಂದ್ರ, ನೆಹರು ಯುವ ಕೇಂದ್ರದ ಅಮರೇಶ್ ಸೇರಿದಂತೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕ್ಷೇತ್ರದಲ್ಲಿ ಕಳಪೆ ಕಾಮಗಾರಿ ಸಹಿಸುವುದಿಲ್ಲ: ನೇಮಿರಾಜ್ ನಾಯ್ಕ

ಮೊದಲ ಪುಟದಿಂದ

ಮಲ್ಲಿಕಾರ್ಜುನಗೆ ಶಾಸಕರು ಸೂಚಿಸಿದರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೊಳ್ಳಿ ವಾಮದೇವ ತಮ್ಮ ಇಲಾಖೆಯ ಪ್ರಗತಿಯನ್ನು ಸಭೆಗೆ ಮಂಡಿಸುತ್ತಿದ್ದಂತೆಯೇ ಕೋಪಗೊಂಡ ಶಾಸಕ ನೇಮಿರಾಜ್ ನಾಯ್ಕ, ರೈತರು ಕಷ್ಟಪಟ್ಟು ಬೆಳೆ ವಿಮೆ ಕಟ್ಟಿರುತ್ತಾರೆ. ವಿಮೆ ಕಂಪನಿ ಮತ್ತು ಮೀಡಿಯೆಟರ್ ಒಂದಾಗಿ ರೈತರಿಗೆ ಮೋಸ ಮಾಡಿದ ಪ್ರಕರಣಗಳಿವೆ. ಇಂತಹವರನ್ನು ಪತ್ತೆಹಚ್ಚಿ ನಾನ್ ಬೇಲೇಬಲ್ ಕೇಸ್ ಹಾಕಿಸಿ ಜೈಲಿಗೆ ಕಳುಹಿಸುತ್ತೇನೆ ಎನ್ನುತ್ತಿದ್ದಂತೆ, ಕೆಡಿಪಿ ಸಭೆಯ ನಾಮ ನಿರ್ದೇಶಕ ಪರಶುರಾಮ್, ತೂಲಹಳ್ಳಿಯಲ್ಲಿ ಇಂತಹದ್ದೇ ಘಟನೆ ನಡೆದಿದೆ ಎಂದು ಸಾಥ್ ನೀಡಿದಾಗ, ರೈತರಿಗೆ ಅನ್ಯಾಯ ವಾಗುವುದಕ್ಕೆ ನಾನು ಬಿಡುವುದಿಲ್ಲ ವಿಧಾನ ಸೌಧದಲ್ಲಿಯೂ ಪ್ರಶ್ನೆ ಮಾಡ್ತೀನಿ ಎಂದರು.

ತಾಲೂಕು ಆರೋಗ್ಯ ಅಧಿಕಾರಿ ಹರಾಳು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಿರ್ಮಿಸಲು ಜಾಗ ಸಿಕ್ಕ ತಕ್ಷಣ ನಿರ್ಮಿಸಲಾಗುವುದು ಎಂದು ಸಭೆಗೆ ಶಾಸಕರು ತಿಳಿಸಿದರು. ಡಾ. ಪ್ರದೀಪ್, 12 ಮಾರಾಕ ರೋಗಗಳಿಗೆ ಲಸಿಕೆ ಹಾಕಲಾಗುತ್ತಿದೆ. ಕಣ್ಣಿನ ಕಾಂಟೆಕ್ಟ ಲೆನ್ಸ್ ಹಾಕುವ ಶಸ್ತ್ರ ಚಿಕಿತ್ಸೆಯನ್ನು ಕೊಟ್ಟೂರು ಆಸ್ಪತ್ರೆ ನಡೆಸಲು ಜಿಲ್ಲಾ ಆರೋಗ್ಯ ಇಲಾಖೆಗೆ ಕೇಳಿಕೊಳ್ಳಲಾಗಿದೆ ಎಂದರಲ್ಲದೆ, 100 ಬೆಡ್ ಆಸ್ಪತ್ರೆ ಕಟ್ಟಲು ಕನಿಷ್ಠ 3 ಎಕರೆ ಭೂಮಿಯ ಅಗತ್ಯವಿರುವುದಾಗಿ ತಿಳಿಸಿದರು.

ಎಪಿಎಂಸಿ ಕಾರ್ಯದರ್ಶಿ ಎ.ಕೆ. ವೀರಣ್ಣ ವರದಿ ಓದಲು ಎದ್ದು ನಿಲ್ಲುತ್ತಿದ್ದಂತೆ ಶಾಸಕರು, ತಹಶೀಲ್ದಾರರೆ, ಇವರಿಗೆ ಕಾರ್ಯಕ್ರಮದ ಶಿಷ್ಟಾಚಾರವೇ ಗೊತ್ತಿಲ್ಲ. ಉಲ್ಲಂಘನೆ ಮಾಡಿದ್ದಾರೆ. ಎಪಿಎಂಸಿ ಕಚೇರಿಯನ್ನು ಏನೆಂದುಕೊಂಡಿದ್ದೀರಿ, ಅಭಿನಂದನೆ ಕಾರ್ಯಕ್ರಮಕ್ಕೆ ಯಾಕೆ ಅವಕಾಶ ಕೊಟ್ಟಿರಿ, ಇವರಿಗೆ ನೋಟೀಸ್ ನೀಡಿ ಎಂದು ಸೂಚಿಸಿದಾಗ, ಇದನ್ನು ಸಮರ್ಥಿಸಿಕೊಂಡ ಅವರು, ಎಪಿಎಂಸಿಯಿಂದ 80 ಹಮಾಲರಿಗೆ ವಿಮೆ ಮಾಡಿಸಿದ್ದೇವೆ. 1 ಕೋಟಿ ರು. ಸೆಸ್ ಸಂಗ್ರಹಿಸಲು ಗುರಿ ನೀಡಲಾಗಿತ್ತು. ಸೆಪ್ಟಂಬರ್‌ನಲ್ಲಿ 64 ಲಕ್ಷ ರೂ. ನವೆಂಬರ್‌ನಲ್ಲಿ 20 ಲಕ್ಷ ರೂ. ಸಂಗ್ರಹವಾಗಿದ್ದು, 6 ಲಕ್ಷ ಟನ್ ಮೆಕ್ಕೆಜೋಳ ವ್ಯಾಪಾರವಾಗಿದೆ ಇನ್ನೂ ಮೆಕ್ಕೆಜೋಳ ಮಾರುಕಟ್ಟೆಗೆ ಬರುತ್ತಿದೆ ಎಂದು ಮಾಹಿತಿ ನೀಡಿದರು.

ಲೋಕೋಪಯೋಗಿ ಇಲಾಖೆಗೆ ಎರಡು ಮೂರು ಕೋಟಿ ರೂ. ಕೊಟ್ಟರೂ ರಸ್ತೆ ಕಾಮಗಾರಿ ಮಾಡಿಲ್ಲವೆಂದು ಶಾಸಕರು ಗರಂ ಆಗುತ್ತಿದ್ದಂತೆಯೇ, ಲೋಕೋಪಯೋಗಿ ಇಲಾಖೆ ಎಇಇ ನಾಗನಗೌಡ, ನಮ್ಮಲ್ಲಿ ಯಾವ ಹಣನೂ ಇಲ್ಲವೆಂದು ಉತ್ತರಿಸಿದರು, ಶಾಸಕ ಕೆ.ಅಯ್ಯನಹಳ್ಳಿ ರೈಲ್ವೆ ಬ್ರಿಡ್ಜ್, ಪಟ್ಟಣದ ತುಂಗಭದ್ರ ಕಾಲೇಜ್‌ನಿಂದ ಸನ್ನಿಧಿ ಕಾಲೇಜ್ ತನಕ, ತಿಮ್ಮಲಾಪುರಕ್ಕೆ ಕ್ರಾಸ್, ಚಿರಬಿ ರಸ್ತೆ ದುರಸ್ತಿ ಮಾಡುವಂತೆ ಎಇಇಗೆ ಸೂಚಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಆಹಾರ ಧಾನ್ಯ ಸರಬರಾಜು ಆಗುತ್ತಿರುವ ಬಗ್ಗೆ ಸುದೀರ್ಘ ಚರ್ಚೆ ನಡೆದು, ನನ್ನ ಗಮನಕ್ಕೆ ಬಾರದೆ ಬಿಲ್ ಮಾಡಬಾರದೆಂದು ಶಾಸಕರು ಇಲಾಖೆ ಅಧಿಕಾರಿಗೆ ಆದೇಶಿಸಿದರು. ವೇದಿಕೆಯಲ್ಲಿ ತಹಶೀಲ್ದಾರ್ ಜಿ.ಕೆ. ಅಮರೇಶ, ತಾಪಂ ಇಒ ಡಾ. ಆನಂದಕುಮಾರ್ ಇದ್ದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಜಿಲ್ಲಾ ಮಟ್ಟಕ್ಕೆ ಜಾನ್ಹವಿ ಆಯ್ಕೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಅಭಿನಯ ಗೀತೆ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿ ಜಾನ್ಹವಿ ಆರ್.ಎಸ್.ಪ್ರಥಮ ಸ್ಥಾನಗಳಿಸಿ, ಜಿಲ್ಲಾಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ ಎಂದು ಚಂದ್ರಶೇಖರಪುರ ಗ್ರಾಮದ ಶ್ರೀ ಗುರುದೇವ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಗುರುಗಳಾದ ಅನುಪಮ ತಿಳಿಸಿದ್ದಾರೆ.



ತಾಲ್ಲೂಕಿನ ಚಂದ್ರಶೇಖರಪುರ ಗ್ರಾಮದ ಶ್ರೀ ಗುರುದೇವ ಹಿರಿಯ ಪ್ರಾಥಮಿಕ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿಯಾಗಿದ್ದು, ಕೂಡ್ಲಿಗಿ ಪಟ್ಟಣದ ಜ್ಞಾನ ಭಾರತಿ ಶಾಲೆಯಲ್ಲಿ ಸಾಕ್ಷರತಾ ಇಲಾಖೆಯು ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಅಭಿನಯ ಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿನಿಯ ಪ್ರತಿಭೆಗೆ ಶಾಲೆಯ ಅಧ್ಯಕ್ಷರಾದ ಕೆ. ಕೊಟ್ರೇಶ್, ಶಿಕ್ಷಕಿ ಮಮತಾ, ಶಿಕ್ಷಕರು ಸೇರಿದಂತೆ ಇತರರು ಹರ್ಷವ್ಯಕ್ತಪಡಿಸಿದ್ದಾರೆ.

## ಪ್ರತಿಯೊಬ್ಬ ನಾಗರಿಕರನ್ನು ಗೌರವಿಸೋಣ: ಡಿಹೆಚ್‌ಓ

**ಹಂಪಿ ಟೈಮ್ಸ್ ಬಳ್ಳಾರಿ**

ಸಂವಿಧಾನದ ಆಶಯದಂತೆ ಸಮಾಜದಲ್ಲಿನ ಪ್ರತಿಯೊಬ್ಬ ನಾಗರಿಕರನ್ನು ಗೌರವದಿಂದ ಕಾಣುವುದರೊಂದಿಗೆ ತಾಯಿ ಮಗುವಿನ ಆರೋಗ್ಯ ಸೇರಿದಂತೆ ಎಲ್ಲ ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳ ತಡೆಗೆ ಶ್ರಮಿಸೋಣ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿ ಅವರು ಮಾತನಾಡಿದರು.

1949 ನೇ ನ.26 ರಂದು ನಮ್ಮ ದೇಶದ ಲಿಖಿತ ಸಂವಿಧಾನವನ್ನು ಅಂಗೀಕರಿಸಿ ನಾವೆಲ್ಲರೂ ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ. ದೇಶದ ಸಮಗ್ರತೆಯನ್ನು ಎಲ್ಲರ ಸುರಕ್ಷತೆಯೊಂದಿಗೆ ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳು ಸಮಾನವಾಗಿರಬೇಕು ಎಂಬ ಹಿನ್ನೆಲೆಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಯಾವುದೇ ಬೇಧವಿಲ್ಲದೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಆಗಮಿಸುವ ಎಲ್ಲಾ ಸಾರ್ವಜನಿಕರಿಗೆ ಉತ್ತಮವಾಗಿ ಸ್ಪಂದನೆ ಮಾಡಬೇಕು ಎಂದರು.

ಸುರಕ್ಷಿತ ಹೆರಿಗೆ, 12 ಮಾರಕ ರೋಗಗಳ ವಿರುದ್ಧ ಲಸಿಕೆ ನೀಡುವುದು, ಡೆಂಗ್ಯು ನಿಯಂತ್ರಿಸಲು, ಕ್ಷಯರೋಗ, ಕುಷ್ಠರೋಗಗಳನ್ನು ತಡೆಗಟ್ಟಲು, ನಾಯಿ ಕಡಿತ, ಇಲಿಜ್ವರಗಳ ಮುಂಜಾಗ್ರತೆ ಹಾಗೂ ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹಗಳನ್ನು ತೊಡೆದು ಹಾಕುವ ಕಾರ್ಯ ನಾವೆಲ್ಲರೂ ಮಾಡೋಣವೆಂದು ತಿಳಿಸಿದರು.

ಸಂವಿಧಾನದ ಆಶಯಗಳನ್ನು ಗೌರವಿಸುವ ಮೂಲಕ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ತಾಯಿ ಮಗುವಿನ ಕಾಳಜಿಗಾಗಿ ಗುಣಮಟ್ಟದ ಸೇವೆಗಳನ್ನು ನೀಡಿ ಜಿಲ್ಲೆಯನ್ನು ಆರೋಗ್ಯಯುತ ಜಿಲ್ಲೆಯನ್ನಾಗಿ ಮಾಡಲು ಕೈಜೋಡಿಸೋಣ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಕಚೇರಿ ಅಧೀಕ್ಷಕ ಬಸವರಾಜ, ವೆಂಕಟೇಶ, ಸಾರಿಗೆ ಅಭಿಯಂತರರ ವಿಜಯಕುಮಾರ, ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ವಿರುಪಾಕ್ಷಪ್ಪ ಸೇರಿದಂತೆ ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಜಿಲ್ಲಾ ಮಟ್ಟದ ಸಲಹೆಗಾರರು, ಸಮಾಲೋಚಕರು, ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್‌ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ 100 ಪರಿಶಿಷ್ಟ ವರ್ಗದ ಸಂಶೋಧನಾ ವಿದ್ಯಾಥಿಗಳಿಗೆ ಯಾವುದೇ ಫೆಲೋಶಿಪ್ ಪಡೆಯದಿದ್ದಲ್ಲಿ ಮಾಸಿಕ ರೂ.25,000 ಗಳಂತೆ ಶಿಷ್ಯವೇತನ ಪಡೆಯಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸ್ತಕ ಸಾಲಿನ ಸಾಲಿನ ಆಯವ್ಯ ಭಾಷಣದ ಕಂಡಿಕೆ (176)ರಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್‌ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ 100 ಪರಿಶಿಷ್ಟ ವರ್ಗದ ಸಂಶೋಧನಾ ವಿದ್ಯಾರ್ಥಿಗಳಿಗೆ ಯಾವುದೇ ಫೆಲೋಶಿಪ್ ಪಡೆಯದಿದ್ದಲ್ಲಿ, ಮಾಸಿಕ ರೂ.25,000 ಗಳಂತೆ ಶಿಷ್ಯವೇತನ ನೀಡಲಾಗುವುದೆಂದು ಘೋಷಿಸಲಾಗಿರುತ್ತದೆ. ಅರ್ಜಿ ಸಲ್ಲಿಸಲು ಡಿ.14 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ 08392–242453 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ತಿಳಿಸಿದ್ದಾರೆ.